ಕಾನೂನುಗಳನ್ನು ತುಳಿಯುತ್ತಿರುವ ಜಮೀನ್ದಾರ

ಬಡವರ ನಿರಂತರ ಹೋರಾಟದ ಫಲವಾಗಿ ಕರ್ನಾಟಕ ಶ್ರೇಷ್ಠ ನ್ಯಾಯಾಲಯವು ದರಖಾಸ್ತು ಭೂಮಿಗೆ ಸಂಬಂಧಿಸಿದ ಕಾನೂನನ್ನು ಭೂ ಮಾಲೀಕರು ಎಲ್ಲೂ ಪ್ರಶ್ನಿಸದಂತೆ ತೀರ್ಪಿತ್ತಿತು. ಜಮೀನಿಗಾಗಿ ಹಂಬಲಿಸುತ್ತಿದ್ದ ಸಾವಿರಾರು ದಲಿತರು ಬದುಕಿದೆವು ಎಂದು ನಿಟ್ಟುಸಿರುಬಿಡುತ್ತಿದ್ದಂತೆಯೇ ಜಮೀನುದಾರರ ಗೂಂಡಾಗಿರಿಗೆ, ಹಲ್ಲೆಗೆ ತಮ್ಮ ಮೈಗಳನ್ನು ಒಡ್ಡಬೇಕಾಗಿದೆ. ಶ್ರೇಷ್ಠ ನ್ಯಾಯಾಲಯವಲ್ಲ ಯಾವ ನ್ಯಾಯಾಲಯಗಳು ತೀರ್ಪಿತ್ತರೂ ಈ ಜಮೀನುದಾರರ ದರ್ಪ ದಬ್ಬಾಳಿಕೆಗಳನ್ನ, ಬಡವರು ಮುಂದುವರಿಯುವುದರ ಬಗೆಗಿನ ತಮ್ಮ ಅಸಹನೆಯನ್ನು ನಿಲ್ಲಿಸಲಾರರೇನೊ ಎಂಬ ತೀವ್ರವಾದ ಆತಂಕ ಮೂಡಿದೆ. ಕಳೆದ ಸಲ 'ಪಂಚಮ' ಎಚ್ಚರಿಸಿದಂತೆ ದರಖಾಸ್ತು ಭೂಮಿಯನ್ನು ನಾನಾ ಆಮಿಷಗಳೊಡ್ಡಿ ಕಿತ್ತುಕೊಂಡಿದ್ದ ಜಮೀನುದಾರರು ಈಗ ಬಡವರ ಮೇಲೆ ಧಕಾಯಿತರಂತೆ ಆಕ್ರಮಣ ನಡೆಸುತ್ತಾ ಬಡವರ ಆಸೆಗಳ ಗಂಟಿಗೆ ಬೆಂಕಿಯಿಡುತ್ತಿದ್ದಾರೆ. ಇತ್ತೀಚಿಗೆ ಪಿರಿಯಪಟ್ಟಣ ತಾಲ್ಲೂಕು ಬೇಗೂರು ಗ್ರಾಮದಲ್ಲಿನ ದಲಿತ ಮುದುಕಿ ಸಾಕಮ್ಮನ ಮೇಲೆ ಜಮೀನುದಾರರು ರಾತ್ರೋರಾತ್ರಿ ನಡೆಸಿದ ಧಾಳಿ ಮತ್ತು ಹಲ್ಲೆಗಳು ಮೇಲಿನ ಮಾತುಗಳಿಗೆ ಪುಷ್ಟಿಕೊಡುತ್ತವೆ.

ಹತ್ತು ವರ್ಷಗಳಹಿಂದೆ ಉಳುವವರಿಲ್ಲದೆ ವಾರಕ್ಕೆಂದು ಕೊಟ್ಟ ಹತ್ತು ದಲಿತ ಕುಟುಂಬಗಳ ಸುಮಾರು ಮುವ್ವತ್ತು–ನಲ್ವತ್ತು ಎಕರೆಗಳಷ್ಟು ಜಮೀನನ್ನು ಜೋಪಯ್ಯ, ಕೇಶವಣ್ಣ, ಮುಂತಾದ ಭೂಮಾಲೀಕರ ಗುಂಪು ನುಂಗಿ ನೀರುಕುಡಿಯಲು ನೋಡುತ್ತಿದೆ. ಶ್ರೇಷ್ಠ ನ್ಯಾಯಾಲಯವು ಪರಭಾರೆಯಾಗಿರುವ ದಲಿತರ ದರಖಾಸ್ತು ಜಮೀನುಗಳನ್ನು ಬಿಡಿಸಿಕೊಡುವ ತೀರ್ಪುಗಳನ್ನು ಗಮನಿಸಿದೊಡನೆ ಭೂಮಾಲೀಕರು ಎಚ್ಚರಗೊಂಡು 'ಜಮೀನು ನಿಮ್ಮಪ್ಪನ್ದ ?, ಸರ್ಕಾರ ಸಂಪಾದನೆ ಮಾಡಿದ್ದ ?' ಎಂದು ಬಡವರನ್ನು ಬೆದರಿಸುತ್ತ, ಬಡವರ ಹೋರಾಟವನ್ನು, ಸರ್ಕಾರದ ಕಾನೂನುಗಳನ್ನು ಅಣಕಮಾಡುತ್ತಿದ್ದಾರೆ. ದಲಿತರು ಅತ್ಯಂತ ಕ್ರೂರವಾದ ಜಮೀನುದಾರಿ ವ್ಯವಸ್ಥೆ, ಜಾತಿ ವ್ಯವಸ್ಥೆಗಳ ನಡುವೆ ಇದ್ದಾರೆ ಎಂಬುದನ್ನು ಸರ್ಕಾರ ಅರಿತಿಲ್ಲ. ಅರಿತಿದ್ದರೆ ಬಡವರ ಪರವಾಗಿ ಕಾನೂನು ಮಾಡಿ ಬಡವರಿಗೆ ಸಿಗಬೇಕಾಗಿರುವ 'ಸಾಮಾಜಿಕ ನ್ಯಾಯ' ಸಿಗುವಲ್ಲಿ ಸೂಕ್ತವಾದ ವ್ಯವಸ್ಥೆ, ರಕ್ಷಣೆಗಳನ್ನು ಮಾಡಬೇಕಾಗಿತ್ತು. ಬಡವರ ಕಣ್ಣೀರು ಒರೆಸುವುದಾಗಿ ಹೇಳುವ ಸರ್ಕಾರ ಭೂಮಾಲೀಕರ ಕೈಗಳಿಗೆ ಬಂದೂಕು, ಕಾನೂನುಗಳನ್ನು ಕೊಟ್ಟು ಕಣ್ಣೀರು ಸುರಿಸುತ್ತಿದೆ.

ಜಮೀನುದಾರರ ಗೂಂಡಾಗಳ ಹಲ್ಲೆಯಲ್ಲಿ ಎರಡೂ ಕೈಗಳ ಸ್ವಾಧೀನ ಕಳದುಕೊಂಡಿರುವ ಮುದುಕಿ ಸಾಕಮ್ಮನನ್ನು 'ಪಂಚಮ' ಆಸ್ಪತ್ರೆಯಲ್ಲಿ ಭೇಟಿಯಾದಾಗ 'ಜಮೀನುದಾರರು ನ್ಯಾಯವಾಗಿ ಕೇಳಿದ್ದರೆ ಇಬ್ಬರಿಗೂ ನಷ್ಟವಿಲ್ಲದಂತೆ ತೀರ್ಮಾನಕ್ಕೆ ಬರಬಹುದಿತ್ತು' ಎಂದು ಹೇಳುತ್ತಾಳೆ. ಈ ಮಾನವೀಯ ದೃಷ್ಟಿ ಜಮೀನುದಾರರಿಗಾಗಲೀ, ಅಲ್ಲಿನ ಪೋಲೀಸು, ರೆವಿನ್ಯೂ ಅಧಿಕಾರಿಗಳಿಗಾಗಲೀ ಇಲ್ಲವಾಗಿದೆ. ತಾವೇ ನಿಂತು ಗುಡಿಸಲು ಹಾಕಿಸಿದ್ದ ಅಧಿಕಾರಿಗಳು 24 ರ ರಾತ್ರಿ 9 ಗಂಟೆಯಲ್ಲಿ ಕೊಡಗಿನಿಂದ ಬಂದೂಕು, ಗೂಂಡಾಗಳನ್ನು ಕರೆದು ತಂದು ಭೂಮಾಲೀಕರು ಬೆದರಿಕೆ ಗುಂಡುಗಳನ್ನು ಹಾರಿಸಿ, ದೊಣ್ಣೆಗಳಿಂದ ದಲಿತ ಸಾಕಮ್ಮ ಮುಂತಾದವರಿದ್ದ ಗುಂಪಿನ ಮೇಲೆ ಹಲ್ಲೆ ಮಾಡುವಾಗ ರಕ್ಷಣೆಗಾಗಿ ಇದ್ದ ಇಬ್ಬರು ಪೋಲೀಸ್ ಪೇದೆಗಳು ಊಟಕ್ಕೆಂದು ಹೋಗಿದರಂತೆ ಸಾಕಮ್ಮನ ಮೇಲಿನ ಹಲ್ಲೆಯನ್ನು ವಿರೋಧಿಸಿ, ನ್ಯಾಯಕ್ಕಾಗಿ ಬೇಗೂರಿನಿಂದ ಜಾತಾ ನಡೆಸಿದ ದ.ಸಂ.ಸ ಕಾರ್ಯಕರ್ತರು ತಹಶೀಲ್ದಾರರನ್ನು ಮನವಿಪತ್ರ ಸ್ವೀಕರಿಸಲು ಒತ್ತಾಯಿಸಿದಾಗ ಉಂಡು ಸಿಗರೇಟು ಸೇದುತ್ತ ಡುರುಕಿ ಹೊಡೆಯುತ್ತ ಗತ್ತಿನಲ್ಲಿ ಬಂದು ನಿಂತರು. ಅಧಿಕಾರಿಗಳ ಇಂಥ ನಿರ್ಲಕ್ಷ್ಯ ಪ್ರವೃತ್ತಿಯೇ ಭೂಮಾಲೀಕರು ಕೊಬ್ಬಿ ಬೆಳೆಯಲು ಕಾರಣವಾಗಿದೆ.

—ಸಂಪಾದಕ

ಪಂಚಮ

ಸಂಪುಟ : 6 ಸಂಚಿಕೆ : 20 ಬೆಲೆ : 50ಪೈಸೆ ನವಂಬರ್ 5, 1982

ಇನ್ನಿಲ್ಲವಾದ ಹೋರಾಟಗಾರ ಜಿ. ಸೋಮಶೇಖರ್

ತುಮಕೂರಿನ ರಾಮರಾವ್ ಅಗಲಿದ ಸುದ್ದಿಯಿಂದ ಚೇತರಿಸಿಕೊಳ್ಳುತ್ತಿದ್ದಂತೆಯೇ ಮತ್ತೊಂದು ಆಘಾತದ ಸುದ್ದಿ. ದ.ಕ. ಜಿಲ್ಲೆಯ ದ.ಸಂ.ಸ. ಸಂಚಾಲಕರಾಗಿದ್ದ ಜಿ. ಸೋಮಶೇಖರ್ ಆಕಸ್ಮಿಕ ಮೃತ್ಯುವಿಗೆ ಬಲಿಯಾಗಿದ್ದಾರೆ. ಪಿರಿಯಾಪಟ್ಟಣದ ಕಾರ್ಯಕರ್ತರ ಶಿಬಿರದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಸ್ನಾನಕ್ಕೆಂದು ಗೆಳೆಯ ಗೋಪಾಲ್ ಜೊತೆಯಲ್ಲಿ ಕಾವೇರಿ ನದಿಗೆ ಹೋದ ಸೋಮಶೇಖರ್ ನೀರಿನ ಆಳವನ್ನರಿಯದೆ ಕಾಲು ಜಾರಿ ಬಿದ್ದರು. ಈ ದೇಶದ ಅಸಂಖ್ಯಾತ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಿ ಜಯಶೀಲರಾಗುತ್ತಿದ್ದ ಸೋಮಶೇಖರ್ 27-10-82ರ ಬೆಳಗ್ಗೆ ಸಾವನ್ನು ಗೆಲ್ಲಲಾಗಲಿಲ್ಲ.

ಸಕಲೇಶಪುರ ತಾಲ್ಲೂಕಿನ ಹಾಡ್ಯದ ಮಂಜಪ್ಪ ಪೂಜಾರಿಯವರ ಒಬ್ಬನೇ ಮಗ. ಬಡತನದೊಟ್ಟಿಗೆ ಹೋರಾಟವು ಸಹಜವಾಗಿ ಮೈಗೂಡಿತು. ಸಂಘರ್ಷ ಸಮಿತಿಯು ಜಾತ್ಯತೀತ ಸಂಘಟನೆಯೆಂದು ಮನಗಂಡ ಸೋಮಶೇಖರ್ ದ.ಸಂ. ಸದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಂಗಳೂರಿನ ಬೆಸೆಂಟ್ ಸಂಜೆ ಕಾಲೇಜಿನಲ್ಲಿ ಅಂತಿಮ ಬಿ.ಎ ಯಲ್ಲಿ ಓದುತ್ತ, ಪತ್ರಿಕೆಯಲ್ಲಿ ದುಡಿಯುತ್ತ, ಬರೆಯುತ್ತ, ಸಂಘಟನೆ–ಹೋರಾಟಗಳ ಮುಂಚೂಣಿಯಲ್ಲಿದ್ದು ಬೆಳೆಯುತ್ತಿರುವಾಗಲೇ ಸಾವಿಗೆ ಬಲಿಯಾಗಿ ವೃದ್ಧ ತಂದೆ–ತಾಯಿಗಳನ್ನು, ಅಪಾರವಾದ ಒಡನಾಡಿಗಳನ್ನು ತಬ್ಬಲಿಗಳನ್ನಾಗಿ ಮಾಡಿದ್ದಾರೆ. ಮೃತ್ಯು ಸೋಮಶೇಖರ್ ಅವರನ್ನು ಎಳೆದೊಯ್ದಿರಬಹುದು. ಆದರೆ, ಅವರ ಸ್ನೇಹಪೂರ್ಣ ಒಡನಾಟ, ಹೋರಾಟ, ನಗು ಪ್ರೀತಿ, ಚಿಂತನೆಗಳು ನಮ್ಮೊಟ್ಟಿಗೆ ಬದುಕುತ್ತವೆ, ಸ್ಫೂರ್ತಿಯ ಸೆಲೆಯಾಗುತ್ತವೆ ಎಂದು ಅತ್ಯಂತ ನೋವಿನಿಂದ ಹೇಳಬೇಕಾಗಿದೆ.



ನನ್ನಣ್ಣ ಸೋಮಶೇಖರ

ಸೋಮಶೇಖರಣ್ಣನೇ
ನಿನಗೆ ಕೆಂಪು ವಂದನೆ
ಇದು ನಿನ್ನ ಮರಣವಲ್ಲ
ನಾಳಿನ ಸೂರ್ಯನಕಿರಣ ||ಸೋ||

ಹಾಸನ ಜಿಲ್ಲೆಯಲ್ಲಿ
ಸಕಲೇಶಪುರ ತಾಲ್ಲೊಕಿನಲ್ಲಿ
ಹಾಡ್ಯ ಗ್ರಾಮದ ಬಿಲ್ಲನ
ಜಾತಿಯಲ್ಲಿ ಹುಟ್ಟಿ ಬಂದು
ಆ ಹಳ್ಳಿಯ ಹರಕು ಮುರುಕು
ಗುಡಿಸಲಲ್ಲಿ ಸಿಡಿದೆಯಣ್ಣ
ಇಪ್ಪತ್ತರ ಹರೆಯದನೀ
ಹೋರಾಟದ ಜೀವಿಯಾದೆ ||ಸೋ||

ಸಕಲೇಶಪುರದಲ್ಲಿ ನೀನು
ವಿದ್ಯಾವಂತ ನಾದೆಯಣ್ಣ
ಮಂಗಳೂರಿಗೆ ಸೇರಿ ನೀನು
ಪತ್ರಿಕೆಯಲ್ಲಿ ದುಡಿದೆಯಣ್ಣ ||ಸೋ||

ದಲಿತ ಸಂಘದವನೆಂದು
ಬಡವರ ಪರಾನಿಂತು
ಜಮೀನ್ದಾರ ವರ್ಗಕ್ಕೆ ನೀ
ಸಿಂಹ ಸ್ವಪ್ನವಾಗಿ ನಿಂತೆ ||ಸೋ||

ಮಂಗಳೂರಿನ ಲಂಚ ಕೋರರ
ಬಣ್ಣ ಬಯಲಿಗೆಳೆದೆಯಣ್ಣ
ಬಡವರ ಪಾಲಿಗೆ ನೀನು
ಕೆಂಪು ಜ್ವಾಲೆಯಾಗಿ ನಿಂತೆ ||ಸೋ||

ಪೇಜಾವರ ದಲಿತರನ್ನು
ಸಂಘಟನೆ ಮಾಡಿದ್ಯಣ್ಣ
ಜಾತಿ ಶತ್ರು ಎದೆಗಳಲ್ಲಿ
ಫಿರಂಗಿಯಾಗಿ ಸಿಡಿದೆಯಣ್ಣ ||ಸೋ||

ದಲಿತರಿಗೆ ಭೂಮಿನೀಡೊ
ಹೋರಾಟ ನಡಿಸಿದ್ಯಣ್ಣ
ದಲಿತರಿಗೆ ಭೂಮಿ ಕೊಡಿಸಿ
ಬಾಳ ಬೆಳಗಿಸಿದ್ದೆಯಣ್ಣ ||ಸೋ||

ಬಡವರ ಮುಕ್ತಿಗೆ ನೀನು
ಹೋರಾಟವೆ ಮಾರ್ಗವೆಂದ
ಎಂಬತ್ತೆರಡು ಅಕ್ಟೋಬರ
ಇಪ್ಪತ್ತೇಳ ರಂದು
ಯಥಾಸ್ಥಿತಿ ಸೂರ್ಯನು
ಹುಟ್ಟುವ ಮುನ್ನವೆ ನೀನು
ಕಾವೇರಿ ನದಿ ನೀರ
ಪಾಲಾಗಿ ನೀ ಹೋದೆಯಣ್ಣ ||ಸೋ||

ಈ ಮರಣದ ಮಾತುಕೇಳಿ
ಶತ್ರು ಬಳಗ ಕುಣಿದರಣ್ಣ
ಆನೀಚರಿಗೇನು ಗೊತ್ತು
ಸಂಘವೆಂದ್ರೆ ಬಡವರೆಂದು
ನಿನಗೆ ಸಾವು ಇಲ್ಲವಣ್ಣ
ಅವರ ಸಾವು ತಪ್ಪದಣ್ಣ ||ಸೋ||

ನಿನ್ನ ಸಾವು ಕಂಡ ಲಕ್ಷ
ಲಕ್ಷ ಜನರು ನೊಂದರಣ್ಣ
ನೀನು ಮತ್ತೆ ಜನರ ಮಧ್ಯೆ
ಬರಲೇ ಬೇಕೆಂದರಣ್ಣ ||ಸೋ||

ಸಮಸಮಾಜ ಹುಟ್ಟಿಗಾಗಿ
ಪಣ ತೊಟ್ಟುನಿಂತೆಯಣ್ಣ
ದಲಿತ ಮುಕ್ತಿಯ ಕೆಂಪು
ಜ್ವಾಲೆ ಉರಿಸಬೇಕೆಂದು
ಊರೂರು ಸುತ್ತಿ ನೀನು
ದಲಿತ ಸಂಘ ಬೆಳೆಸಿದ್ಯೆಣ್ಣ ||ಸೋ||

ಇದು ನಮ್ಮ ಶಿಕ್ಷಣ ಪದ್ಧತಿ!

ಮಾನವನ ನಾಗರೀಕ ಬದುಕಿನ ಸರ್ವತೋಮುಖ ಅಭಿವೃದ್ಧಿಯ ತಳಹದಿಯಾದ ಶಿಕ್ಷಣವು ಮಾನವನ ಮನಸ್ಸನ್ನೂ ಅರಳಿಸಿ ಅವನನ್ನು ವೈಚಾರಿಕ, ಮಾನವೀಯ ನೆಲೆಯಲ್ಲಿ ಚಿಂತಿಸುವಂತೆ ಮಾಡುವ ಸಾದನ. ಮನುಷ್ಯ ತನ್ನನ್ನು ತಾನು ಅರ್ಥೈಸಿ ಕೊಳ್ಳಲು ಆಮೂಲಕ ಸಮಾಜದಲ್ಲಿ ತನ್ನನ್ನು ಗುರುತಿಸಿ ಕೊಳ್ಳಲು, ಶಾಂತಿ ಪೂರ್ಣ ಬದುಕು ಸಾಗಿಸಲು, ಜೀವನದ–ಸಮಾಜದ ಸಮಸ್ಯೆಗಳನ್ನು ವೈಜ್ಞಾನಿಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು, ಸುತ್ತಲಿನ ಅನ್ಯಾಯಗಳನ್ನು ಕಂಡಾಗ ಸ್ಪಂದಿಸಲು ಸಾಧ್ಯವಾಗಿಸುವ ಸಾಧನ ಶಿಕ್ಷಣ.

ಆದರೆ ನಾವು ಪಡೆಯುವ ಶಿಕ್ಷಣ ನಮ್ಮನ್ನು ಮಾನವೀಯವಾಗಿಸುವ ಇಲ್ಲವೇ ವೈಜ್ಞಾನಿಕ–ವೈಚಾರಿಕ ಚಿಂತನ ಶೀಲರನ್ನಾಗಿಸುತ್ತಿಲ್ಲ. ನಮ್ಮೊಳಗಿನ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸಲು ಸಹಕರಿಸುತ್ತದೆ ಎಂದರೆ ಬಹುಶಃ ತಪ್ಪಾಗದು !

ಮಹಾತ್ಮಗಾಂಧಿ ಹೇಳುವಂತೆ "ಯಾವ ಶಿಕ್ಷಣ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಸಾಮಾಜಿಕ ಕೆಡುಕುಗಳ ಅಥವಾ ಇನ್ನಿತರ ಅನ್ಯಾಯಗಳ ವಿರುದ್ಧ ಹೋರಾಡುವಂತೆ ಸಿದ್ಧಗೊಳಿಸಲಾರದೋ ಆ ಶಿಕ್ಷಣ ಪದ್ಧತಿಯಲ್ಲಿ ಮೂಲಭೂತವಾಗಿಏನೋ ದೋಷವಿದೆ." ಈ 'ದೋಷ'ದ ಬಗ್ಗೆ ನಮ್ಮ ಶಿಕ್ಷಣ ತಜ್ಞರು ಗಮನ ಹರಿಸಿಲ್ಲವೆ ?

ಪ್ರಾಚೀನ ಭಾರತದಲ್ಲಿ ಶಿಕ್ಷಣ ಕೆಲವೇ ಮಂದಿಗೆ ಮೀಸಲಾಗಿ ಅಸಂಖ್ಯಾತ ಜನರನ್ನು ಅಜ್ಞಾನದಲ್ಲಿಡಲಾಗಿತ್ತು.

ಇಂಡಿಯದಲ್ಲಿ ಬಿಳಿಯರ ಆಳ್ವಿಕೆ ಪ್ರಾರಂಭವಾದಾಗ ಅವರು ತಮ್ಮ ಕೆಲಸಗಳಿಗಾಗಿ ಧಣಿಗಳ ಚಾಕರಿ ಮಾಡುವ ಸೇವಕರನ್ನು ಮತ್ತು ಧಣಿಗಳ ಗೈರುಹಾಜರಿಯಲ್ಲಿ ಇತರ ಸೇವಕರ ಮೇಲೆ ದಬ್ಬಾಳಿಕೆ ನಡೆಸುವ ಮೇಲ್ವಿಚಾರಕರನ್ನೂ, ಕೆಳದರ್ಜೆಯ ಅಧಿಕಾರಿಗಳನ್ನು ಹಾಗೂ ಗುಮಾಸ್ತರನ್ನು ತಯಾರು ಮಾಡಲಿಕ್ಕಾಗಿ ರೂಪುಗೊಂಡ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಈಗ ಬ್ರಿಟಿಷರು ಭಾರತದಿಂದ ಕಾಲ್ತೆಗೆದರೂ ಅವರು ಸೃಷ್ಟಿಸಿದ ಈ ಶಿಕ್ಷಣ ನೀತಿಯಿಂದ ನಾವಿನ್ನೂ ವಿಮುಕ್ತರಾಗಿಲ್ಲ !

ನಮ್ಮ ಶಿಕ್ಷಣ ಪದ್ಧತಿ ಸ್ವಾತಂತ್ರ್ಯ ನಂತರವೂ ಬದಲಾಗದೇ ಹಾಗೇ ಮುಂದುವರಿಯಲು ಕಾರಣ: ಬ್ರಿಟಿಷರನ್ನು ವಿರೋಧಿಸುತ್ತಿದ್ದರೂ ಬ್ರಿಟಿಷತ್ವವನ್ನೂ, ಅವರ ಸಾಮ್ರಾಜ್ಯಶಾಹಿ ಮೌಲ್ಯಗಳನ್ನು ಅಂತರಿಕವಾಗಿ ಒಪ್ಪಿಕೊಂಡು ಅದನ್ನೇ ಜೀವನದಲ್ಲಿ ಅಳವಡಿಸಿಕೊಂಡಿದ್ದ, ಆದರ್ಶವಾಗಿರಿಸಿ ಕೊಂಡಿದ್ದ ಈ ದೇಶದ ಮೇಲ್ಜಾತಿ–ಮೇಲ್ವರ್ಗದ ಮಂದಿಗೆ ಅಧಿಕಾರವನ್ನು ಹಸ್ತಾಂತರಿಸಲಾಯಿತು. ಬ್ರಿಟಿಷರ ನಂತರ ಈ ವರ್ಗ ಹಿಂದಿನ ಶಿಕ್ಷಣ ನೀತಿಯನ್ನೇ ಮುಂದುವರಿಸಿಕೊಂಡು ಹೋಯಿತೇ ವಿನಾ ಈ ನೆಲದ ಬದುಕಿಗೆ ಅಗತ್ಯವಾದ ಶಿಕ್ಷಣದ ಕುರಿತು ಯೋಚಿಸಲಿಲ್ಲ. ಇಂತಹ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಆದರ್ಶ ದರ್ಪದಿಂದ ಮೆರೆಯುವ ಅಧಿಕಾರಿ... ಶೋಷಕರ ಶೋಕೀ ಜೀವನ ! ಇಂಗ್ಲಿಷ್ ಮೂಲದ ಈ ಮನೋಭಾವ ಸಾಮಾನ್ಯವಾಗಿ ಪಟ್ಟಣದ ವಿದ್ಯಾರ್ಥಿಗಳಿಗೆ ತೀರ ಸಮೀಪವಾಗಿದೆ ಎನ್ನಬಹುದು. ಹಳ್ಳಿಗಳ ವಿದ್ಯಾರ್ಥಿಗಳಲ್ಲಿ ಈ ಮನೋಭಾವ ಕಡಿಮೆ. ಈ ವಿದ್ಯಾರ್ಥಿಗಳ ಜೀವನ ಸ್ಥಿತಿ, ಕಲಿಯುವ ಹಳ್ಳಿಯ ಶಾಲೆಗಳು ತೀರ ದುಸ್ಥಿತಿಯಲ್ಲವೆ. ವಿಶ್ವವಿದ್ಯಾನಿಲಯಗಳಪ್ರೊಫೆಸರುಗಳ ಮುಖದ ಗೆಲುವನ್ನು ಕಡಿಮೆ ಸಂಬಳದ ಪ್ರಾಥ

ಪುಟ 4 ಕ್ಕೆ

ಇದು ನಮ್ಮ ಶಿಕ್ಷಣ ಪದ್ಧತಿ!

ಮಿಕ ಶಾಲೆಯ ಬಡ ಅಧ್ಯಾಪಕರ ಮುಖದಲ್ಲಿ ಕಾಣಲಾಗದು.

ಉನ್ನತ ಮಟ್ಟದ ಶಿಕ್ಷಣಕ್ಕೆ ಮನಬಂದಂತೆ ವೆಚ್ಚಮಾಡುವ ಸರ್ಕಾರ ಪ್ರಾಥಮಿಕ ಶಿಕ್ಷಣದ ಕಡೆ ಹೆಚ್ಚಿನ ಗಮನ ನೀಡುತ್ತಿಲ್ಲ; ಇಂದು ಇಡೀ ಶಿಕ್ಷಣ ರಂಗದಲ್ಲೇ ತೀರ ಉಪೇಕ್ಷೆಗೊಳಪಟ್ಟ ಕ್ಷೇತ್ರ ಪ್ರಾಥಮಿಕ ಶಿಕ್ಷಣ. ತನ್ನ ಜೀವನಾಡಿಯನ್ನು ಹಳ್ಳಿಗಳಲ್ಲಿ ಹೊಂದಿರುವ ಭಾರತವು ಸ್ವಾತಂತ್ರ್ಯ ಬಂದಿದೆ ಎಂದು ಕೊಂಡು 35 ವರ್ಷಗಳು ಕಳೆದರು ಇನ್ನೂ ಒಂದು ಲಕ್ಷ ಹಳ್ಳಿಗಳು ಪ್ರಾಥಮಿಕ ಶಾಲೆಗಳನ್ನು ಹೊಂದಿಲ್ಲ !

ವಿದ್ಯಾರ್ಥಿಗಳ ಮನಸ್ಸು, ಯೋಚನಾಮಟ್ಟ, ವಾಸ್ತವತೆಯನ್ನು ಕಡೆಗಣಿಸಿ ವಿರೋಧಾಭಾಸಗಳಿಂದ ಕೂಡಿದ ಪಾಠಗಳನ್ನು ಕಲಿಯುವಂತೆ ಮಾಡಲಾಗಿದೆ. ಅವೈಚಾರಿಕ, ಅವೈಜ್ಞಾನಿಕ ಪಾಠಗಳ ಶಿಕ್ಷಣ, ವಿದ್ಯಾರ್ಥಿಗಳ ಯೋಚಿಸುವ ಪ್ರಶ್ನಿಸುವ ಮನೋಭಾವವನ್ನೂ ಕುಂಠಿತಗೊಳಿಸಿದೆ ಇದರ ಪ್ರತಿಫಲ ಎಲ್ಲವನ್ನು ಒಪ್ಪಿಕೊಳ್ಳುವ ಗುಲಾಮೀ ಪ್ರವೃತ್ತಿ !

ಗಂಡು ಹೆಣ್ಣುಗಳಿಗೆ ತಮ್ಮಲ್ಲಿ ಆತ್ಮ ಗೌರವ ಮೂಡಿಸಿ ಸಮಾನತೆಯ ಅರ್ಥವನ್ನು ಮನದಟ್ಟು ಮಾಡಿಸಿ, ತಮ್ಮನ್ನು ಕೀಳಾಗಿ ಕಾಣುವವರಿಗಿಂತ ತಾವೇನೂ ಕಡಿಮೆಯಿಲ್ಲ ಎನ್ನುವ ಭಾವನೆಯನ್ನು ಶಿಕ್ಷಣ ಮೂಡಿಸಿದಾಗ ಅಂತಹ ಶಿಕ್ಷಣ ಅರ್ಥಪೂರ್ಣ ಸಾಮಾಜಿಕ ಬದಲಾವಣೆಯನ್ನು ಸಾಧ್ಯವಾಗಿಸುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದ ಮಹಿಳೆಯರಿಗೆ ಹಾಗೂ ದಲಿತರಿಗೆ ಶಿಕ್ಷಣ ದೊರೆಯುವುದು ಅಗತ್ಯವಾಯಿತು.

ಆದರೆ ನಮ್ಮಲ್ಲಿ ಮಹಿಳೆಯರ ಶಿಕ್ಷಣ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡಿದೆಯೇ ಹೊರತು, ಸುತ್ತಲಿನ ಅನ್ಯಾಯ ಅತ್ಯಾಚಾರ–ದಬ್ಬಾಳಿಕೆಗಳಿಗೆ ಸ್ಪಂದಿಸುವ ಸಾಮಾಜಿಕ ಜವಾಬ್ದಾರಿಯತ್ತ ಕೊಂಡೊಯ್ಯುವಲ್ಲಿ ಶೋಚನೀಯವಾಗ ಸೋತಿದೆ. ಅವರು ಪಡೆಯುವ ಶಿಕ್ಷಣ ಪದವಿಪ್ರಿಯರನ್ನಾಗಿಸಿದೆಯೆ ಹೊರತು ಪ್ರತಿಭಟನಾ ಶಕ್ತಿಯನ್ನು ಸಿದ್ಧಗೊಳಿಸುತ್ತಿಲ್ಲ.

ನಮ್ಮ ಯುವಕರು ಡಾಕ್ಟರರೋ, ಇಂಜಿನಿಯರರೋ, ಆಫೀಸರರೋ ಆಗುವ ಕನಸು ಕಂಡರೆ, ಯುವತಿಯರು ಡಾಕ್ಟರರನ್ನು....ಆಫೀಸರರನ್ನು ಮದುವೆಯಾಗುವ, ಸ್ಕೂಟರು ಕಾರು, ಮಹಡಿ ಮನೆಗಳ ಕನಸುಕಾಣುತ್ತಾರೆ. ಇದಕ್ಕೊಂದು ಮಧ್ಯವರ್ತಿ-ಶಿಕ್ಷಣ.

ತನ್ನ ಸುತ್ತಲಿನ ವಾತಾವರಣ ಸ್ವಚ್ಛವಾಗಿರದೆ ತಾನು ಮಾತ್ರ ಸ್ವಚ್ಛವಾಗಿರಲು ಸಾಧ್ಯವಿಲ್ಲವೆಂಬ ಸಾಮಾಜಿಕ ಜವಾಬ್ದಾರಿಯನ್ನುಂಟು ಮಾಡುವ ಹೊಣೆ ಶಿಕ್ಷಣದ್ದಾಗಬೇಕು. ಗಂಡುಹೆಣ್ಣುಗಳು ಆರ್ಥಿಕವಾಗಿ ಸ್ವತಂತ್ರರಾಗಿ, ಇನ್ನೊಬ್ಬರಿಗೆ ತೊಂದರೆಯಾಗದಂತೆ, ತಮಗೆ ಸರಿಕಂಡಂತೆ ಬದುಕುವ ಧೈರ್ಯವನ್ನು ಮಾಡುವ ಆ ಮೂಲಕ ಹೊಸ ನೈತಿಕಮೌಲ್ಯಗಳಿಗೆ ಅವಕಾಶವೀಯುವ ಮಾಧ್ಯಮವಾಗಬೇಕು ಶಿಕ್ಷಣ. ಆದರೆ ನಮ್ಮಲ್ಲಿ ಹೀಗಾಗುತ್ತಿದೆಯೆ ?

ಡಾ|| ಅಂಬೇಡ್ಕರರ ಹೋರಾಟದ ಫಲದಿಂದ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪಂಗಡಗಳಿಗೆ, ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮುಂದುವರಿಯಲು ಸಾಧ್ಯವಾಗಿದೆ. ಈವರ್ಗಗಳ ಏಳಿಗೆಗೆ ಮೂಲ ಭೂತವಾಗಿ ಶಿಕ್ಷಣದ ಅವಶ್ಯಕತೆಯನ್ನು ಅಂಬೇಡ್ಕರ್ ಒತ್ತಿ ಹೇಳಿದ್ದರು.

ಆದರೆ ಇಂದು ಈ ವರ್ಗಗಳ ನಡುವಿನಿಂದ ಬಂದ ಪ್ರಭಾವೀ ಮಧ್ಯಮವರ್ಗ ಎಲ್ಲಾ ಸವಲತ್ತುಗಳನ್ನೂ ಕಬಳಿಸಿ ಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. 'ಕಡ್ಡಾಯ ಶಿಕ್ಷಣ' ಘೋಷಣೆಯಾಗಿ ಕೆಲವು ವರ್ಷಗಳಾದರೂ ಹಳ್ಳಿಗಳ ಬಡ ಹಾಗೂ ಕೆಳವರ್ಗಗಳ ಮಕ್ಕಳ ಪಾಲಿಗಿನ್ನೂ ಈ ಘೋಷಣೆ ಹುಸಿಯಾಗಿದೆ. ಬಡತನ ಹಾಗೂ ತಮ್ಮ ಪರಿಸರದಿಂದ ಪೂರ್ಣ ಭಿನ್ನವಾದ ಶಿಕ್ಷಣ ಈ ವಿದ್ಯಾರ್ಥಿಗಳು ಕಲಿಯದಂತೆ ತಡೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಶಿಕ್ಷಣ ಶೋಷಿತರ ವಿಮೋಚನೆಯ ಸಾಧನವಾಗಬೇಕಾದ್ದು ಅತ್ಯಗತ್ಯ.

ಹಳ್ಳಿಗಳ ನಾಡಾದ ಭಾರತದ ಆರ್ಥಿಕತೆಯನ್ನು ಚೆನ್ನಾಗಿ ಅರ್ಥೈಸಿ ಕೊಂಡಿದ್ದರೆನ್ನಲಾದ ಗಾಂಧೀಜಿ, ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವ ವೃತ್ತಿ ಶಿಕ್ಷಣವೇ ಪ್ರಧಾನವಾದ ಶಿಕ್ಷಣದ ಕುರಿತು ಪ್ರಗತಿಪರ ವಿಚಾರಗಳನ್ನು ಪ್ರತಿಪಾದಿಸಿದ್ದರೂ ಗಾಂಧಿವಾದಿ ಆಳುವ ವರ್ಗಗಳು ಅವುಗಳನ್ನು ಗಾಳಿಗೆ ತೂರಿವೆ. ಇಂದಿನ ನಮ್ಮ ಶಿಕ್ಷಣ ಕಲಿಕೆಗೂ, ವೃತ್ತಿಗೂ ಸಂಬಂಧವೇ ಇಲ್ಲದಂತಾಗಿ ಆ ಮೂಲಕ ಬದುಕಿಗೂ ಶಿಕ್ಷಣಕ್ಕೂ ಕೂಡಾ ಸಂಬಂಧವಿಲ್ಲದಂತಾಗಿದೆ.

ಹೊಂದಾಣಿಕೆಯೇ ಇಲ್ಲದ ವಿವಿಧ ವಿಷಯಗಳನ್ನು ಕಲಿಸುವ ಮಾನವನನ್ನು ಸ್ವತಂತ್ರ ಚಿಂತನೆಯತ್ತ ಕೊಂಡೊಯ್ಯದ ಈಗಿನ ಶಿಕ್ಷಣ ವ್ಯವಸ್ಥೆ ಅವಿದ್ಯಾವಂತ ಮೂಢನಂಬಿಕಸ್ಥನನ್ನು ವಿದ್ಯಾವಂತ ಮೂಢನಂಬಿಕಸ್ಥನನ್ನಾಗಿಯೂ, ಅವಿವ್ಯಾವಂತ ಜಾತಿವಾದಿಯನ್ನು ವಿದ್ಯಾವಂತ ಜಾತಿವಾದಿಯನ್ನಾಗಿಯೂ ಪರಿವರ್ತಿಸುತ್ತದೆ.

—ಜಿ. ಸೋಮಶೇಖರ್.

ಒಂದು ವ್ಯಗ್ರತೆ

ಅಂತಿಮವಾಗಿ ಜನರು ಆರೋಗ್ಯ ಆನಂದ
ಸುಸ್ಥಿತಿಯನ್ನೇ
ಆರಾಧಿಸುತ್ತಾರೆ. ಈ ನಮ್ಮ ಗುರು
ವಿಚಾರವಾದಿಯನ್ನೆ ನೋಡಿ : ನಮಗೆ ಕುಡಿತ
ವ್ಯಸನ ಹಚ್ಚಿದವರು
ನಮ್ಮ ನರಗಳ ತಂತಿಯ ಮಾಡಿ ಹರಿದವರು, ಈಗ
ಪ್ರಾತಃಕಾಲದಲ್ಲಿ ಸೂರ್ಯನಮಸ್ಕಾರ ಪರಮ
ಶ್ರೇಯಸ್ಕರ
ಎನ್ನಹತ್ತಿದ್ದಾರೆ.
ಹಾಗೇ ನನ್ನ ಬುದ್ಧಿಮತ್ತೆಗೇ ಒಲಿದ ಹುಡುಗಿ
ಯಾರಿಗಾಗಿ ಯಾವ ಎತ್ತರದಿಂದ ಬೀಳಲೂ ನಾನು
ಸಿದ್ಧನಿದ್ದೆನೋ ಹಿಂಜರಿಯಲಿಲ್ಲವೊ ಹೇಸಲಿಲ್ಲವೋ
ಆಕೆ, ಇನ್ನೂ ನನ್ನ ನೆನಪಿಟ್ಟಿಲ್ಲ.
ಯಾಕೆ, ಈ ಪ್ರಿಯಮಿತ್ರನನ್ನೇ ನೋಡಿ—ಜೊತೆ
ಜೊತೆಗೇ
ಹಿಗ್ಗಿದವನು ಕುಗ್ಗಿದವನು, ಬದುಕನ್ನ
ಪಡೆದವನು ಜರೆದವನು, ಅವನೊಡನೆ
ನರಕಕ್ಕೇ ನಡೆಯಲು ನಾನು ತಯಾರಿದ್ದೆನು ;
ಆದರೆ ಅವನು
ಎಂದೂ ತನ್ನೊಳಗಿನಾಳದ ಸ್ವಸಂತೋಷದ
ಚಿಲುಮೆಯನ್ನ ಕಾದುಕೊಂಡಿದ್ದನು,
ತೃಪ್ತಿ ಪ್ರತಿಮೆ ಕಡೆದು ನಿಲ್ಲುತ್ತಾನೆ,
ನನ್ನಿದಿರು ಈಗ.
ಮತ್ತು ಆದರ್ಶವಾದಿ ಹಿರಿಯರು ಆರಾಮಾಗಿ
ನೆಲೆಸಿರುವ ಉದಾಹರಣೆಗಳಿಷ್ಟೊಂದು
ನಮ್ಮ ಬತ್ತಿದ ಕಣ್ಣ ಮುಂದಿವೆ.

—ಪಿ. ಬಿ. ಶೆಲ್ಲಿ

ಅನುವಾದ : ಎಸ್. ಮಂಜುನಾಥ್

ನೇರಲಗೆರೆಯಲ್ಲಿ ದೌರ್ಜನ್ಯ: ಪಿಯುಸಿಎಲ್ ತನಿಖ

೧೯೮೨ ಅಕ್ಟೋಬರ್ ೧೫ರ ರಾತ್ರಿ ೮ ಗಂಟೆಯ ಸಮಯ–ಸವರ್ಣೀಯರ ದೌರ್ಜನ್ಯದ ಬೆಂಕಿಗೆ ನೇರಲಗೆರೆಯ ಹರಿಜನರ ೨೪ ಗುಡಿಸಲುಗಳು ಆಹುತಿಯಾದುವು, ಮೂವರು ಹರಿಜನ ಯುವಕರ ಮೇಲೆ ಹಲ್ಲೆ ನಡೆದು ಪ್ರಜ್ಞಾಹೀನನಾದ ಒಬ್ಬ ಆಸ್ಪತ್ರೆ ಸೇರಿದ. ನಾಗರಿಕ ಹಕ್ಕುಗಳಿಗಾಗಿ ಜನರ ಒಕ್ಕೂಟದ ಮೈಸೂರು ಘಟಕ ಸರ್ವಶ್ರೀ ಕ್ಷೀರಸಾಗರ, ಲಕ್ಷ್ಮಣರಾವ್ ಕದಂ ಮತ್ತು ಕೆ ಶಿವರಾಮು ಐತಾಳರನ್ನೊಳಗೊಂಡ ತನಿಖಾ ತಂಡವನ್ನು ಅಲ್ಲಿಗೆ ಕಳಿಸಿತು. ಅದರ ತನಿಖಾ ವರದಿ ಇದು.

ನೇರಲೆಗೆರೆ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿಗೆ ಸೇರಿದ ಒಂದು ಹಳ್ಳಿ. ಇಲ್ಲಿ ಸುಮಾರು 450 ಸವರ್ಣೀಯರ ಕುಟುಂಬಗಳಿವೆ. ಅವುಗಳಲ್ಲೂ 10-12 ಕುಟುಂಬಗಳನ್ನು ಬಿಟ್ಟರೆ ಉಳಿದುವು ಒಂದು ಮುಖ್ಯ ಕೋಮಿಗೆ ಸೇರಿದುವು. 40 ಹರಿಜನರ ಕುಟುಂಬಗಳಿವೆ, ನೀರಾವರಿ ಪ್ರದೇಶದ ಮಡಿಲೊಳಗೇ ಇದ್ದರೂ, ದಿಬ್ಬದಲ್ಲಿರುವುದರಿಂದ ಇಲ್ಲಿನ ಸುತ್ತುಮುತ್ತಿನ ಜಮೀನುಗಳೆಲ್ಲ ಮಳೆಯನ್ನೇ ನಂಬಿ ವ್ಯವಸಾಯ ನಡೆಯಬೇಕಾಗಿದೆ. ಆದರೆ ಇಲ್ಲಿಗೆ 2–3 ಮೈಲಿಗಳಾಚೆ ಇರುವ ನೀರಾವರಿ-ಜಮೀನಿನ ಸ್ವಲ್ಪ ಭಾಗಕ್ಕೆ ಇಲ್ಲಿ ಸವರ್ಣೀಯರು ಒಡೆಯರಾಗಿದ್ದಾರೆ. ಹರಿಜನರಲ್ಲಿ ಒಂದೆರಡು ಕುಟುಂಬಗಳನ್ನು ಬಿಟ್ಟರೆ ಉಳಿದವರೆಲ್ಲ ಭೂಹೀನರು. ಇವರು ತಲೆತಲಾಂತರದಿಂದಲೂ ಸವರ್ಣೀಯರ ಹೊಲ ಗದ್ದೆಗಳಲ್ಲಿ ಕೂಲಿ ಮಾಡಿ, ಜೀತಮಾಡಿ ಜೀವನ ಸಾಗಿಸುತ್ತಿದ್ದರು. ಜೀತ ವಿಮುಕ್ತಿ ಕಾಯಿದೆ ಬಂದ ಮೇಲೂ ಈಚಿನವರೆಗೂ ಜೀತಕ್ಕಿಟ್ಟುಕೊಂಡಿದ್ದ ಪ್ರಕರಣಗಳಿವೆ. ಈಚೆಗೆ ಹರಿಜನರ ಮೇಲೆ ಬಹಿಷ್ಕಾರ ಹಾಕಿದ ನಂತರ ಜೀತಕ್ಕಿದ್ದ - ಇಬ್ಬರು ಹರಿಜನ ಹುಡುಗರನ್ನು ಉಚ್ಚಾಟಿಸಲಾಯಿತು.

ದಶಕದಷ್ಟು ಹಳೆಯ ರೋಷ

ಹರಿಜನರ ಮೇಲೆ ಈಚೆಗೆ ಆಸ್ಫೋಟಗೊಂಡ ಸವರ್ಣೀಯರ ರೋಷ ಕೊನೆಯ ಪಕ್ಷ ದಶಕದಷ್ಟು ಹಳೆಯದು. ಹರಿಜನರು ವಿದ್ಯಾವಂತರಾಗಲು ಪ್ರಾರಂಭಿಸಿದಂತೆ, ಪಟ್ಟಣಗಳಲ್ಲಿ ನೌಕರಿ ಹಿಡಿದಂತೆ, ಸಮತೆ ಸಾಮಾಜಿಕ ಪ್ರಜ್ಞೆ ಮೂಡಿದಂತೆ ಮೇಲು ವರ್ಗದ ಮೇಲಾಳ್ತನವನ್ನು ತಿರಸ್ಕರಿಸುತ್ತಿದ್ದಂತೆ ಸವರ್ಣೀಯರ ಅಸಹನೆ ಹೆಚ್ಚಾಗುತ್ತಾ ಬಂತು. ಸುಮಾರು 7 ವರ್ಷಗಳ ಹಿಂದೆ ಸವರ್ಣೀಯರ ಹಬ್ಬಗಳಿಗೆ ತಮ್ಮಟೆ ಹೊಡೆಯುವುದನ್ನು ನಿಲ್ಲಿಸಿದಾಗ ಹರಿಜನರಿಗೆ 3 ವರ್ಷ ಸಾಮಾಜಿಕ ಬಹಿಷ್ಕಾರ ಹಾಕಿದರು. ಅನಂತರ ಈಚಿನವರೆಗೂ ಸಣ್ಣ ಪುಟ್ಟ ಘರ್ಷಣೆಗಳ ನಡುವೆಯೇ ಸಹಜೀವನ ಹೇಗೋ ಮುಂದುವರಿಯಿತು.

ಮತ್ತೆ ಬಹಿಷ್ಕಾರ

ಈ ಅಸಹನೆಯ ಹೊಗೆ ಮತ್ತೆ ಕಿಡಿ ಕಾರಿದ್ದು 17–9–82 ರಂದು. ಮಹಾಲಯ ಪಕ್ಷ ದಿನ ಹರಿಜನರು ಮಡಿಕೆಗಳಲ್ಲಿ ನೀರು ತುಂಬಿಕೊಂಡು ಶಂಭುಲಿಂಗ ದೇವರ ಮುಂದಿಟ್ಟು ಪೂಜಿಸುವುದು ಪದ್ಧತಿ. ಅದರಂತೆ ನೀರು ಹಿಡಿಯುತ್ತಿದ್ದಾಗ ನೇರಲಗೆರೆಯ ಪಂಚಾಯಿತಿಯ ವೈಸ್ ಛೇರ್ಮೆನ ಮಗ ನೀರು ಹಿಡಿಯಲು ಬಂದ. ಸ್ವಲ್ಪ ತಡವಾದಾಗ ಆತನ ತಂದೆಯೇ ಬಂದು ಮಗನ ಪರ ವಹಿಸಿ 'ಅದು ಹೇಗೆ ನೀರು ತೆಗೆದುಕೊಳ್ಳುತ್ತೀರಿ?' ಎಂದು ಸವಾಲು ಹಾಕಿದರು. ಹರಿಜನರು ತಮ್ಮ ಹಕ್ಕನ್ನು ಪ್ರತಿಪಾದಿಸಿ ಪೋಲೀಸರಲ್ಲಿಗೆ ಹೋಗಲು ಸಿದ್ಧರಾದರು. ಪೋಲೀಸರು ಬಂದರು. ಸಮಜಾಯಿಷಿಯಾಯಿತು. ಆದರೆ ಸಮಸ್ಯೆ ಬೇರೆ ದಿಕ್ಕು ಹಿಡಿಯಿತು. "ನಿಮ್ಮ ನೀರು ನೀವು ತೆಗೆದುಕೊಳ್ಳಿ ಆದರೆ ನಮ್ಮ ಬೀದಿಗೆ ಕಾಲು ಹಾಕಿ ನೋಡಿ" ಎಂದು ಹರಿಜನರಿಗೆ ತಾಕೀತು ಮಾಡಿದರು ಅಲ್ಲಿಂದ ಸವರ್ಣೀಯರು 'ಅವರ' ನೀರು ಮುಟ್ಟಲಿಲ್ಲ. ಅವರಿಗೆ ಆರ್ಥಿಕ ಬಹಿಷ್ಕಾರ ಹಾಕಲಾಯಿತು. ಅಂಗಡಿಗಳಿಂದ ಅಗತ್ಯ ವಸ್ತುಗಳನ್ನು ಅವರಿಗೆ ಕೊಡುವುದನ್ನು ನಿಷೇಧಿಸಿದರು. ಕೂಲಿನಾಲಿಗೆ ಕರೆದುಕೊಳ್ಳುವುದನ್ನೂ ಬಂದು ಮಾಡಲಾಯಿತು. ನೇರಲಗೆರೆಯಲ್ಲಷ್ಟೇ ಅಲ್ಲ; ಸುತ್ತಮುತ್ತಲಿನ ಹಳ್ಳಿಗಳಾದ ಹುಣಸಗಳ್ಳಿ, ಸೀಯಳ್ಳಿ, ಗೊರನಹಳ್ಳಿ ಮತ್ತು ವ್ಯಾಚನ ಹಳ್ಳಿಗಳಲ್ಲೂ ಇವರನ್ನು ಕೆಲಸಕ್ಕೆ ಕರೆಯದಂತೆ ಮಾಡಲೂ ಬಹುಮಟ್ಟಿಗೆ ಯಶಸ್ವಿಯಾದರೆನ್ನಲಾಗಿದೆ. ಹರಿಜನ ಹೆಂಗಸೊಬ್ಬರು ಹೇಳಿದಂತೆ "ಸೀಯಳ್ಳಿಯಲ್ಲಿ ನಮಗೆ ಯಾವಾಗಲೂ ಸೀಮೆ ಎಣ್ಣೆ ಕೊಡುತ್ತಿದ್ದವರು ಈಗ ಮೂರು ದಿನಗಳಿಂದ ಇದ್ದೂ ಕೊಡದೆ ಖಾಲಿ ಸೀಸೆಗಳೊಡನೆ ಕಳಿಸಿದರು."

ಈ ನಡುವೆ ಸರ್ಕಾರದವರು ಹರಿಜನರಿಗೆ ಹಂಚಿದ್ದ ಸೈಟುಗಳಲ್ಲಿ ಸ್ವತಃ 30 ಗುಡಿಸಲುಗಳನ್ನು ಕಟ್ಟಿಸಿಕೊಟ್ಟಿದ್ದರು. ಇಕ್ಕಡೆಯವರಿಗೆ ಸಮಜಾಯಿಷಿ ಮಾಡಿದ ಪೋಲೀಸರು ಬಹಿಷ್ಕರಿಸಿದ್ದರೂ ಮತ್ತೆ ಆಸ್ಫೋಟಗೊಳ್ಳುವಂಥ ಬಿಗು ಸ್ಥಿತಿಯಿದ್ದರೂ ಯಾವುದೇ ಮುಂಜಾಗ್ರತೆಯನ್ನು ವಹಿಸದೆ ಹೋದರು.

ಸ್ಮಶಾನದ ಬೆಂಕಿಯ ಝಳದಲ್ಲಿ

1982 ಅಕ್ಟೋಬರ್ 15 ರಂದು ತೀವ್ರ ಖಾಯಿಲೆಗೆ ಒಳಗಾಗಿದ್ದ ಹರಿಜನ ಹೆಣ್ಣುಮಗಳು ಸತ್ತಳು. ಪರಂಪರೆಯಿಂದ ಮಣ್ಣು ಮಾಡುತ್ತಿದ್ದಲ್ಲಿಗೆ ಹೆಣ ಕೊಂಡೊಯ್ದರು. ಆ ಸ್ಥಳ ದ್ಯಾವೇಗೌಡನ ಸಿದ್ದನ ಮಗನಿಗೆ ಸೇರಿದ್ದರಿಂದ ಅಲ್ಲಿ ಹೆಣ ಸುಡಲು ಸವರ್ಣೀಯರು ಅವಕಾಶ ಕೊಡದೆ ತಡೆದರು. ಬೇರೆ ದಾರಿ ಕಾಣದೆ ಹರಿಜನರ ದಳಪತಿ ಮೊಟಯ್ಯ, ದೇವರ್ಸೇನ ಮಗ ಹೊನ್ನಯ್ಯ ಮೊದಲಾದ ಯುವಕರು ಪೋಲೀಸರಿಗೆ ದೂರೊಯ್ಯಲು ಹೊರಟರು. ಅದಕ್ಕೆ ಅವಕಾಶ ಕೊಡದೆ ಸವರ್ಣೀಯರು 'ಹೋಗಲಿ ಸುಟ್ಟುಕೊಳ್ಳಿ' ಎಂದು ಒಪ್ಪಿಗೆ ಕೊಟ್ಟು ಹೋದರು.

ಹೆಣ ಸುಟ್ಟು ಹರಿಜನರು ಊರಿಗೆ ಮರಳಿದಾಗ ರಾತ್ರಿ ಸುಮಾರು 7-30, 8ರ ಸಮಯ. ಸುಮಾರು 100–150 ಜನರ ಸವರ್ಣೀಯರ ಗುಂಪು ಕೂಗಾಡುತ್ತಾ ಹರಿಜನರ ಕೇರಿಗೆ ದಾಳಿಯಿಟ್ಟಿತು. ದಿಕ್ಕಾಣದ ಹರಿಜನರು ಗುಡಿಸಲೊಳಗೆ ಮುದುರಿ ಸೇರಿದರು. ಸವರ್ಣೀಯರ ಸಿಟ್ಟೆಲ್ಲ ದಳಪತಿ ಅಲಿಯಾಸ್ ಮೋಟಯ್ಯ ಮೊದಲಾದ ನಾಲ್ವರು ಯುವಕರ ಮೇಲಿತ್ತು. ಮೋಟಯ್ಯ ತನ್ನ ಗುಡಿಸಲಿನಲ್ಲಿರಲಿಲ್ಲ 'ಅವನನ್ನು ಇವತ್ತು ಎಲ್ಲಿದ್ದರೂ ಬಿಡುವುದಿಲ್ಲ' ಎಂದು ಒಂದೊಂದು ಗುಡಿಸಲಿನೊಳಕ್ಕೂ 'ಎಕ್ಕಡದ ಕಾಲಿನೊಡನೆ' ನುಗ್ಗಿ ಹುಡುಕಿದರು. ತಲೆಮರೆಸಿಕೊಂಡಿದ್ದ ಮೋಟಯ್ಯ ಎಲ್ಲೂ ಸಿಗಲಿಲ್ಲ. ದೇವರಸಯ್ಯನ ಗುಡಿಸಲಿಗೆ ನುಗ್ಗಿದಾಗ ಆತನ ಮಗ ಓದುತ್ತ ಕುಳಿತಿದ್ದ ಹೊನ್ನಯ್ಯ 'ಮೋಟಯ್ಯನ ವಿಷಯ ತಿಳಿಯದು' ಎಂದ ಹಾಗಾದರೆ ನೀನೇ ಬಾ ಎಂದು ಎಳೆದುಕೊಂಡು ಹೊಡೆದರು. ತಡೆಯ ಬಂದವರೂ ಏಟು ತಿಂದರು. (ಅನಂತರ ಪ್ರಜ್ಞೆತಪ್ಪಿದ ಹೊನ್ನಯ್ಯನನ್ನು ಪೋಲೀಸ್ ಜೀಪಿನಲ್ಲಿ ಆಸ್ಪತ್ರೆಗೆ ಸೇರಿಸಲಾಯಿತು) ಅಲ್ಲಿಂದ ಹಿಂದಿರುಗುವಾಗ ಕೊನೆಯ ಕ್ರಮವಾಗಿ, ಆಯುಧ ಪೂಜೆಯ ದಿನ ವಾಸ ಹೋಗಬೇಕೆಂದಿದ್ದ, ಹೊಸದಾಗಿ ಕಟ್ಟಿದ ಗುಡಿಸಲುಗಳಿಗೆ ಬೆಂಕಿಯಿಟ್ಟರು. 24 ಗುಡಿಸಲುಗಳು ಭಸ್ಮವಾದವು.

8 ನೇ ಪುಟಕ್ಕೆ

ಹಿಂದೂ ಪರಿಕಲ್ಪನೆಗಳನ್ನು ನಾಶ ಮಾಡದೆ ಈ ಸಮಾ

ಸಂದರ್ಶನ

ಇತ್ತೀಚೇಗೆ ದಲಿತ ಪಾಂಥರ್‌ಗಳು ತಮ್ಮ ಸಂಘಟನೆಯ 10ನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಪೂನಾದಲ್ಲಿ ಎರಡು ದಿನಗಳು ನಡೆದ ಈ ಸಮಾರಂಭದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ದಲಿತ ಪಾಂಥರ್ಸ್ ಸಂಸ್ಥಾಪಕರಲ್ಲಿ ಒಬ್ಬರಾದ ನಾಮದೇವ್‌ಡಸಾಲೆಯವರು ಈ ಸಂದರ್ಭದಲ್ಲಿ ಮಾತನಾಡಿದರು 1970 ರಲ್ಲಿ ದಲಿತ ಪಾಂಥರ್ಸ್ ಹುಟ್ಟಿಕೊಂಡನಂತರ ಈವರೆಗೆ ಪಾಂಥರ್ಸ್ ಮತ್ತು ಡಸಾಲೆ ಇಬ್ಬರೂ ತಮ್ಮ ಹಾದಿಯಲ್ಲಿ ಮುನ್ನಡೆದಿದ್ದಾರೆ.

ಡಸಾಲೆಯವರು ಮೊದಲು ಕವಿಯಾಗಿ ಕಾಣಿಸಿಕೊಂಡವರು. ಕವಿಯಾಗಿ ಈತ ಪಡೆದ ಪ್ರಸಿದ್ಧಿ ನಂತರ ದಲಿತ ನಾಯಕನಾಗಲು ಅವಕಾಶ ಮಾಡಿಕೊಟ್ಟಿತು. ನಕ್ಸಲೀಯರ ಜೊತೆ ಸರಸವಾಡಿದ, ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದ, ನಂತರ ಜನತಾ ಪಕ್ಷವನ್ನೂ ಬೆಂಬಲಿಸಿದ ಈತ ರಾಜಕೀಯ ಗೊಂದಲಗಳ ವ್ಯಕ್ತಿಯಂತೆ ಕಾಣುತ್ತಾರೆ. "ನಾನು ಕೆಲಕಾಲ ಕುಡಿತ ಮತ್ತು ವ್ಯಭಿಚಾರದ ದುಶ್ಚಟಗಳಿಗೆ ಬಲಿಯಾಗಿದ್ದದ್ದು ನಿಜ" ಎಂದು ಒಪ್ಪಿಕೊಳ್ಳುವ ಈತ ಈಗ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಮತ್ತು ದಲಿತ ಪಾಂಥರ್ಸ್ ಸಂಘಟನೆಯನ್ನು ವ್ಯವಸ್ಥಿತವಾಗಿ ಕಟ್ಟುವ ದಿಶೆಯಲ್ಲಿ ಚಿಂತಿಸತೊಡಗಿದ್ದಾರೆ. ಸುಧೀರ್ ಸೋನಾಲ್‌ಕರ್ ಅವರು ಪೂನಾದಲ್ಲಿ ಡಸಾಲೆ ಜೊತೆ ನಡೆಸಿದ ಸಂದರ್ಶನದ ತಿರುಳು ಇಲ್ಲಿದೆ.

*ದಲಿತ ಪಾಂಥರ್ಸ್ ಹುಟ್ಟಿ ಇಂದಿಗೆ 10 ವರ್ಷಗಳಾಗಿವೆ. ಪ್ರಾರಂಭದಲ್ಲಿ ನೀವೂ ಸೇರಿದಂತೆ ಈ ಸಂಘನೆಯ ಸಂಸ್ಥಾಪಕರೆಲ್ಲ, ನಾವೇ ನಿಜವಾದ ಅಂಬೇಡ್ಕರ್‌ವಾದಿಗಳು, ಎಂದು ಘೋಷಿಸಿಕೊಂಡು ರಿಪಬ್ಲಿಕನ್ ಪಕ್ಷವನ್ನು ಟೀಕಿಸುತ್ತಿದ್ದಿರಿ. ಅಂದರೆ ಈಗ, ಅಂಬೇಡ್ಕರ್ ವಾದದ ಮೂಲ ಅರ್ಥವೇನು ? ವಿವರಿಸುತ್ತೀರಾ ?

ಪ್ರತಿಯೊಂದು ಸಮಸ್ಯೆಯೂ ಕೂಡ ತನ್ನದೇ ಆದ ವಿಜ್ಞಾನ ಮತ್ತು ವ್ಯವಸ್ಥೆಯ ಸ್ವಂತ ವಿವರಣೆಯನ್ನು ಪಡೆದಿರುತ್ತದೆ. 'ಇಸಂ'ಗಳ ಬಗ್ಗೆ ಮಾತನಾಡುವಾಗ ಸಹ ಇದೇ ರೀತಿಯ ಸಾಮ್ಯತೆಯನ್ನು ಗುರುತಿಸಬಹುದು. ಉದಾಹರಣೆಗೆ ಮಾರ್ಕ್ಸ್‌ವಾದ ಎಂದರೆ ಚಾರಿತ್ರಿಕ ಭೌತವಾದ, ವರ್ಗ ಹೋರಾಟ, ರಾಜಕೀಯ ಆರ್ಥಿಕ ವ್ಯವಸ್ಥೆ ಇತ್ಯಾದಿ. ಅಂಬೇಡ್ಕರ್ ವಾದಕ್ಕೆ ಈ ರೀತಿಯ ವಿಶಾಲ ರೂಪವಿಲ್ಲದಿರಬಹುದು, ಆದರೆ ಅಂಬೇಡ್ಕರ್ ವಾದ ಅಸ್ಪೃಶ್ಯತೆಯನ್ನು ನಾಶಮಾಡಲು ಕರೆ ನೀಡುವಂತಹ ಒಂದು 'ಇಸಂ.'

ಅಂಬೇಡ್ಕರ್‌ವಾದದ ಪ್ರಕಾರ ಅಸ್ಪೃಶ್ಯತೆಯನ್ನು ನಾಶಮಾಡಲು ಯಾವ ಮಾರ್ಗವಾದರೂ ಆಗಬಹುದು. ಇದು ಪಾರ್ಲಿಮೆಂಟರಿ ವ್ಯವಸ್ಥೆಯ ರೂಪದಲ್ಲೆ ಇರಬಹುದು ಅಥವಾ ಪಾರ್ಲಿಮೆಂಟರಿ ವ್ಯವಸ್ಥೆಯನ್ನೂ ಮೀರಿದ ಕಾರ್ಯಕ್ರಮಗಳ ರೂಪದಲ್ಲೇ ಇರಬಹುದು. ಸುಧಾರಣಾವಾದಿ ರೂಪದಲ್ಲಿರಬಹುದು ಅಥವಾ ಸಾಂಸ್ಕೃತಿಕ ರೂಪದಲ್ಲಿರಬಹುದು ಇತ್ಯಾದಿ. ಅಂದರೆ ಅಂಬೇಡ್ಕರ್ ಮಾಡಿದ ಹೋರಾಟಗಳು ಮತ್ತು ಅವರು ಬಳಸಿದ ಸಾಧನಗಳು ವಿವಿಧ ಬಗೆಯವಾಗಿವೆ. ಒಟ್ಟಿನಲ್ಲಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಅಂಬೇಡ್ಕರ್‌ರವರು ಮಾಡಿದ ಎಲ್ಲಾ ಬಗೆಯ ಚಿಂತನೆ ಮತ್ತು ಕಾರ್ಯಕ್ರಮಗಳ ಮೊತ್ತವನ್ನು ಅಂಬೇಡ್ಕರ್ ವಾದ ಎಂದು ಕರೆಯಬಹುದು.

1972 ರಲ್ಲಿ ರಿಪಬ್ಲಿಕನ್ ಪಕ್ಷದಿಂದ ನಾವು ಬೇರ್ಪಡಲು ಕಾರಣವಿತ್ತು. ಆಗ ದಲಿತರ ಮೇಲೆ ದೇಶಾದ್ಯಂತ ದೌರ್ಜನ್ಯದ ಅಲೆ ಎದ್ದಿತ್ತು. ಇಂಥ ಸಮಯದಲ್ಲೂ ಸಹ ರಿಪಬ್ಲಿಕನ್ ಪಕ್ಷ ತನ್ನ ಸಂಕುಚಿತ ಪಾರ್ಲಿಮೆಂಟರಿ ವ್ಯವಸ್ಥೆಯ ಧೋರಣೆಗಳಿಗೆ ಜೋತು ಬಿತ್ತೇ ಹೊರತು ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಇದ್ದ ಇತರ ಯಾವ ಮಾರ್ಗವನ್ನೂ ಇಡಿಯಲಿಲ್ಲ. ಇದರಿಂದ ಬೇಸತ್ತ ನಾವು ದಲಿತರ ಮಾನವೀಯ ಘನತೆ ಮತ್ತು ಹಕ್ಕುಗಳಿಗಾಗಿ ಹೋರಾಡುವ ಸಲುವಾಗಿ ಅಂಬೇಡ್ಕರ್ ವಾದದ ಶ್ರೀಮಂತ ಪರಂಪರೆಯನ್ನು ಕೈಗೆತ್ತಿಕೊಂಡೆವು. ಅಂಬೇಡ್ಕರ್‌ರವರ ವಿವಿಧ ರೂಪದ ಹೋರಾಟದ ಹಾದಿಯನ್ನು ಪುನರ್‌ನಿರ್ಮಿಸಲು ಶ್ರಮಿಸಿದೆವು.

* ಪೂನಾದಲ್ಲಿ ಎರಡು ದಿನ ನಡೆದ ಸ
ದಲ್ಲಿ ನೀವೂ ಸೇರಿದಂತೆ ಎಲ್ಲಾ ಭಾಷಣ
ಸೋಷಲಿಸ್ಟರು ಮತ್ತು ಕಮ್ಯುನಿಸ್ಟರು
ದ ಪ್ರಸಕ್ತ ಪರಿಸ್ಥಿತಿಯನ್ನು ಬದಲಾ
ಯತ್ನದಲ್ಲಿ ಮಾಡಿದ ತಪ್ಪುಗಳನ್ನು ಮತ
ಮಿತಿಗಳನ್ನು ಧೀರ್ಘವಾಗಿ ಚರ್ಚಿಸಿದ್ದಿ
ಲಾದರೂ ಸೋಷಲಿಸ್ಟರು ಮತ್ತು ಕಮ
ಪಾಠ ಕಲಿತು ದಲಿತರ ಸಮಸ್ಯೆಗಳ ಕ
ಹರಿಸುತ್ತಾರೆ ಎಂದು ನಿಮಗನ್ನಿಸುತ್ತ
ಇರಲಿ, ನಿಮಗೆ ಕಾನೂನು ನೆರವು ಬೇ
ರಿಪಬ್ಲಿಕನ್ ಪಕ್ಷದವರಿಗಿಂತ ಸೋಷಲಿಸ್
ಕಮ್ಯುನಿಷ್ಟರು ಹೆಚ್ಚು ನೆರವು ನೀಡಿದ್ದಾರೆ

ಇಂದಿಗೂ ಸೋಷಿಯಲಿಸ್ಟರು,
ನಿಷ್ಟರು ಅಸ್ಪೃಶ್ಯತೆ ಒಂದು ಮೂಲಭೂ
ಸಮಸ್ಯೆ. ಎಂದು ಪರಿಗಣಿಸುತ್ತಾರೆಂದು
ಭಾವಿಸುವುದಿಲ್ಲ. ಉದಾಹರಣೆಗೆ ಕಮ್ಯು
ಹೇಳುತ್ತಾರೆ : ಕೈಗಾರೀಕರಣ ಬೆಳೆದಂತೆ
ಪದ್ಧತಿಗಳೆಲ್ಲ ಮಾಯವಾಗುತ್ತವೆ. ಆದರೆ
ನಾವು ಕಾಣುತ್ತಿರುವುದಾದರೂ ಏನು ?
ಯಂತ ದೊಡ್ಡ ಕೈಗಾರಿಕಾ ನಗರದ ಕ
ಗಳೆಲ್ಲೂ ಜಾತಿಭೇದವನ್ನು, ಅಸ್ಪೃಶ್ಯತೆ
ಕಾಣುತ್ತೇವೆ. ಇಂದು ದಲಿತರ ಬದುಕಲ್ಲಿ
ಬದಲಾವಣೆ ಕಂಡರೆ ಅದು ಅಂಬೇಡ್ಕರ್‌ರವ
ಒಂದು ಪಕ್ಷ ಅಂಬೇಡ್ಕರ್ ಇಲ್ಲದಿದ್ದರೆ
ಇಂದು ಈ ಹೋಟೇಲಿನಲ್ಲಿ ಕುಳಿತು ನಿಮ್
ಹೀಗೆ ಮಾತನಾಡಲು ಸಾಧ್ಯವಾಗುತ್ತಿ
ಆದರೆ ಕಮ್ಯುನಿಷ್ಟರು ಅಂಬೇಡ್ಕರ್‌ರ
ಉದಾರವಾದಿ ಎಂದು ನಿಂದಿಸುತ್ತಾರೆ.
ನಾವು ಒಪ್ಪುವುದಿಲ್ಲ. ಪ್ರಾಣಿಗಳ ಸ್ಥಿತಿ
ನಮ್ಮನ್ನು ಮನುಷ್ಯರ ಸ್ಥಿತಿಗೆ ತಂದ
ಅಂಬೇಡ್ಕರ್. ಇವರನ್ನು 'ಉದಾರವಾದಿ
ನಿಂದಿಸುವುದು ಬ್ರಾಹ್ಮಣ ಬುದ್ಧಿ
ದುರಹಾಂಕಾರವಲ್ಲದೆ ಮತ್ತೇನೂ ಅಲ್ಲ: ಅ
ಯನ್ನು ಅಸಮಾನತೆಯನ್ನು ನಾಶ
ಶ್ರಮಿಸುವ 'ಯಾವುದೇ 'ಇಸಂ' ಅನ್ನು ಅ
ರ್ ವಿರೋಧಿಸಲಿಲ್ಲ. ಉದಾಹರಣೆಗೆ
ವರ್ಗದ ಪ್ರಭುತ್ವದ ಬಗ್ಗೆ ತೆಗೆದ
ಅಂಬೇಡ್ಕರ್ ಹೇಳಿದರು : "ಇದು ಕೇವಲ
ವರ್ಗದ ಪ್ರಭುತ್ವಕ್ಕೆ ದಾರಿಮಾಡಿಕೊಡ
ರಷ್ಯನರನ್ನು "ಸೋಷಿಯಲ್ ಸಾಮ್ರಾ
ಗಳು" ಎಂದು ನಕ್ಸಲೀಯರು ಕರೆಯುವ
ರೀತಿಯ ಮಾತನ್ನಾಡುತ್ತಾರಲ್ಲವೆ ?

ಬದಲಾವಣೆ ಸಾಧ್ಯವಿಲ್ಲ : ನಾಮದೇವ ಡಸಾಲೆ

ಇಂಡಿಯಾ ಮೂಲಭೂತವಾಗಿ ಹಿಂದೂ ಷ ಎಂದು ನಿಮಗನಿಸುತ್ತದೆಯೆ ? ಇದನ್ನು ವಣೆಗೊಳಿಸುವುದಕ್ಕಾಗಲಿ ಅಥವಾ ಬದಲಿಸು ್ಕಾಗಲಿ ಸಾಧ್ಯ ಎಂದು ನಿಮಗನ್ನಿಸುತ್ತದೆಯೆ? ಕ ಸರ್ಕಾರ ಏನಾದರೂ ಈ ದಿಶೆಯಲ್ಲಿ ದು ಮಾಡುತ್ತದೆಯೆ ?

ಹೌದು, ಇಂಡಿಯಾ ಮೂಲಭೂತವಾಗಿ ು ಸಮಾಜ ಹಿಂದೂ ಪರಿಕಲ್ಪನೆಗಳನ್ನು ಾಡದೆ ಈ ಸಮಾಜದಲ್ಲಿ ಬದಲಾವಣೆ ಯೇ ಇಲ್ಲ. ಹಿಂದೂ ಶಕ್ತಿಗಳು ಮತ್ತೆ ತಲೆ ಾಡಗಿವೆ. ಎಡಪಂಥದ ಶಕ್ತಿಗೆ ಇದನ್ನು ಡಿಯಲು ಸಾಧ್ಯವಾಗಿಲ್ಲ. ಸಧ್ಯದ ಭೂರ್ಜ್ವ ಪ್ರಭುತ್ವ ಸರ್ಕಾರದ ಹಳೆಯ ಕಾಲದ ಪದ್ಧತಿಗಳನ್ನು ಪೋಷಿಸುವ ಹೊರತು ಈ ಮತ್ತೇನನ್ನೂ ಮಾಡುತ್ತಿಲ್ಲ. ಎಡಶಕ್ತಿ ಈ ಅಧಿಕಾರವನ್ನು ಹಿಡಿಯದಿದ್ದಲ್ಲಿ ಈ ಸಮಾಜ ದಲಾವಣೆ ಕಾಣಲು ಸಾಧ್ಯವಾಗುವುದಿಲ್ಲ.

ಬಲಪಂಥೀಯ ಶಕ್ತಿಗಳ ಎದುರು ನೀವು ಶಕ್ತಿಗಳ ಜೊತೆ ಕೂಡಿಕೊಂಡು ಹೋರಾಡು ಹೋರಾಟದ ರೂಪಗಳಲ್ಲಿ ಅಥವಾ ಸಂಘಟ ಹೋರಾಟಗಳಲ್ಲಿ ಯಾವ ರೀತಿಯ ಸಗಳನ್ನು ಕಾಣಬಲ್ಲಿರಿ ?

ಜಯಪ್ರಕಾಶ್ ನಾರಾಯಣರ ಆಂದೋಲ ಂದರ್ಭದಲ್ಲಿ ನೀವು ಹೇಳುವ ಬಲಪಂಥೀಯ ಕಾಣಿಸಿಕೊಂಡಿತು. ಈಗ ಶ್ರೀವಾಜಪೇಯಿ ು ವಿಪುಲ ವಿಶ್ವಾಸವನ್ನು ಗಳಿಸಿರುವ ದೊಡ್ಡ ಕರಾಗಿದ್ದಾರೆ. ಪ್ರಜಾಸತ್ತಾತ್ಮಕ ಶಕ್ತಿ ಕೊಂಡ ಬಣಗಳು ಅಂದು ಬಲಪಂಥೀಯ ನ್ನು ತಮ್ಮೊಳಗೆ ಸೇರಿಸಿಕೊಂಡಿದ್ದವು. ಆಗ .ಸ. ರೀತಿಯ ಶಕ್ತಿಗಳೂ ಸ್ಥಾನ ಪಡೆ ವು. ಆದಕ್ಕೆ ಮುನ್ನ ಅವು ದುರ್ಬಲವಾಗಿ ಬಹುಪಾಲು ಸತ್ತೇ ಹೋಗಿದ್ದವು. ಆಡಳಿತ ುತ್ತು ಸರ್ಕಾರದ ಪ್ರಮುಖ ಹುದ್ದೆಗಳಲ್ಲಿ ್ನು ಈಗ ನೋಡಬಹುದು. ಶ್ರೀಮತಿ ಯವರ ಸರ್ವಾಧಿಕಾರದ ವಿರುದ್ಧ ಹೋರಾ 'ಪ್ರಜಾಪ್ರಭುತ್ವವಾದಿಗಳು' ಈ ಜನರನ್ನು ೂರವಿಡಲಿಲ್ಲ ?

ವಾಸ್ತವವಾಗಿ ಎಡಯ ಶಕ್ತಿಗಳುಪಂಥಿ ಗಬಹುದೆಂದು ನನ್ನ ಎಣಿಕೆ. ಈ ಬಗ್ಗೆ ನಿರಾಶೆ ಇಲ್ಲ. ವೈಯಕ್ತಿಕವಾಗಿ ಹೇಳುವು ನಾನು ಅಸ್ಪೃಶ್ಯತೆಯ ವಿರುದ್ಧ ಹೋರಾ ನ್ನ ಬದುಕನ್ನೇ ಮುಡುಪಿಡಬೇಕೆಂದಿದ್ದೇನೆ. ದಲಿತ ಪಾಂಥರ್‌ನಲ್ಲಿರುವ ನಾವು ಸಮಾಜವಾದ ವನ್ನೇ ನಮ್ಮ ಮಾರ್ಗಸೂಚಿಯಾಗಿ ಇಟ್ಟು ಕೊಳ್ಳುವ ನಮ್ಮ ಹಳೆಯ ನಿಲುವನ್ನೇ ಮುಂದು ವರೆಸುತ್ತೇವೆ.

* ದಲಿತ ಪ್ಯಾಂಥರ್‌ನ ಆರಂಭಿಕ ದಿನಗಳಲ್ಲಿ ನೀವು ನಿಮ್ಮ ಬಾಷಣಗಳಲ್ಲಿ ಮಹಾತ್ಮಗಾಂಧಿ ಯನ್ನು ಬಯ್ಯುತಿದ್ದಿರಿ, ಇಂದು ಅವರ ಬಗ್ಗೆ ನಿಮಗೇನನ್ನಿಸುತ್ತದೆ ? ಇಂದೂ ಕೂಡ ಅವರನ್ನು ಖಳನಾಯಕನನ್ನಾಗಿ ಪರಿಗಣಿಸುವಿರಾ ?

ಅಸ್ಪೃಶ್ಯತೆಗೆ ಸಂಬಂಧಿಸಿದಂತೆ ಗಾಂಧಿ ಖಂಡಿತವಾಗಿಯೂ ಉದಾರವಾದಿಯಾಗಿದ್ದರು. ಆದ್ದರಿಂದ ನನ್ನ ಅಭಿಪ್ರಾಯ ಬದಲಾಗುವುದಾದರೂ ಹೇಗೆ ? ಬ್ರಿಟೀಷರನ್ನು ಓಡಿಸುವ ವಿಷಯ ದಲ್ಲಿ ಆತ ಬಹಳ ದೊಡ್ಡ ನಾಯಕ ಆದರೆ ಆತ ಜಾತಿಪದ್ಧತಿಯ ಬೆಂಬಲಿಗನಾಗಿದ್ದ ಸಮಾಜ ನಾಲ್ಕು ವರ್ಣಗಳಲ್ಲಿ ವಿಂಗಡಿತವಾಗಿರುವುದನ್ನು ಪ್ರತಿಪಾದಿಸಿದ. ಅಸ್ಪೃಶ್ಯತೆಯ ವಿರುದ್ಧದ ಮೂಲ ಹೋರಾಟವನ್ನು ಆತ ಕಡೆಗಣಿಸಿದ. ಆತನ ಪರಿಹಾರಗಳು ಅಸ್ಪೃಶ್ಯತೆಯ ಬೇರುಗಳನ್ನು ಅಲುಗಾಡಿಸಲಿಲ್ಲ.

* ಮರಾಠವಾಡ ವಿಶ್ವವಿದ್ಯಾನಿಲಯದ ಪುನರ್ ನಾಮಕರಣದ ಬಗ್ಗೆ ನಿಮ್ಮ ಅಭಿಪ್ರಾಯ ವೇನು ? ಅದು ಪ್ಯಾಂಥರ್‌ಗಳ ಎದುರು ಇರುವ ಪ್ರಮುಖ ಹೋರಾಟವೆ ? ಅಥವಾ ಇತರ ಹೋರಾಟಗಳು ಮುಖ್ಯವೆ ?

ಇದು ಮೂಲಭೂತ ಹೋರಾಟ ಅಲ್ಲ ; ಮೇಲು ಸ್ವರೂಪದ ಹೋರಾಟವಷ್ಟೆ. ಆದರೆ ಅಂಬೇಡ್ಕರ್ ಬಗ್ಗೆ ಭಾವನಾತ್ಮಕ ಹಾಗೂ ಮೂಲ ಭೂತ ಸಂಬಂಧಗಳನ್ನು ಹೊಂದಿರುವುದರಿಂದ, ದಲಿತರಿಗಾಗಿ ಅಂಬೇಡ್ಕರ್ ಏನೆಲ್ಲ ಮಾಡಿರುವುದ ರಿಂದ ಅವರ ಹೆಸರಿಗಾಗಿ ಜೀವಕೊಡಲೂ ಸಾವಿರಾರು ದಲಿತರು ಸಿದ್ಧರಿದ್ದಾರೆ: ಆದರೆ ಅಂಬೇಡ್ಕರ್ ಹೇಳಿದ್ದಾರೆ. 'ನನ್ನನ್ನು ದೇವರು ಮಾಡಿ ಪೂಜಿಸಕೂಡದೆಂದು. ಆದರೆ ನಿಜವಾಗಿ ಇದೇ ಆಗುತ್ತಿದೆ. ಜಮೀನು, ಬಂಡವಾಳ ಮತ್ತು ತಾಂತ್ರಿಕತೆಯ ಸಮಸ್ಯೆ ಹೆಚ್ಚು ಮೂಲಭೂತವಾಗಿದೆ. ನಾಮಾಂತರ ಚಳುವಳಿಯಂತಹ ಸಾಂಕೇತಿಕ ಪ್ರಶ್ನೆ ಗಳನ್ನೇ ಕೇಳುತ್ತಾ ಎಷ್ಟು ಸಮಯವನ್ನು ನಾವು ಹಾಳುಮಾಡಲು ಸಾಧ್ಯ ? ಹಳ್ಳಿಗಳಲ್ಲಿ ಜೀವಿಸುವ ದಲಿತರ ಸ್ಥಿತಿಗತಿಗಳು ಹೆಚ್ಚು ಮುಖ್ಯ. ದಲಿತರೇ ನಿಜವಾದ 'ಶ್ರಮಜೀವಿ' ಎಂದು ನಾವು ಕಮ್ಯು ನಿಷ್ಟರಿಗಿಂತ ಭಿನ್ನವಾಪೆ ನಂಬಿದ್ದೇವೆ. ವಾಸ್ತವ ವಾಗಿ ವಿಶ್ವವಿದ್ಯಾಲಯದ ಪುನರ್ ನಾಮಕರಣದ ಸಮಸ್ಯೆ ಒಂದು ವಿಷ ವೃತ್ತವಾಗಿದೆ. ಈ ಸಮಸ್ಯೆಯನ್ನು ಮತ್ತೆ ಕೈಗೆತ್ತಿಕೊಂಡರೆ ಅಸ್ಪೃಶ್ಯತೆಯವಿರುದ್ಧ ಹೋರಾಡುವವರು ತೀವ್ರವಾಗಿ ಹಿಮ್ಮೆಟ್ಟುತ್ತಾರೆ.

* ದಲಿತ ಪ್ಯಾಂಥರ್‌ನಲ್ಲಿ ನಿಮ್ಮ ಗುಂಪಿಗೂ ಅರುಣ ಕಾಂಬಳೆಯವರ ಗುಂಪಿಗೂ ಇರುವ ಭಿನ್ನಾಭಿಪ್ರಾಯಗಳೇನು ? ಈ ಭಿನ್ನಾಭಿಪ್ರಾಯ ಯಾರು ಯಾವ ಪ್ರಾಂತದಲ್ಲಿ ಹೆಚ್ಚು ಪ್ರಾಬಲ್ಯರು ಎನ್ನುವ ಪ್ರಶ್ನೆಗೆ ಸಂಬಂಧಿಸಿದುದೆ ? ಅಥವಾ ಮೂಲಭೂತ ಧೋರಣೆಗಳಿಗೆ ಸಂಬಂಧಿಸಿದುವೆ ?

ನಮ್ಮಿಬ್ಬರ ನಡುವಿನ ಭಿನ್ನಾಭಿಪ್ರಾಯಕ್ಕೆ ಅಂಥ ನಿಜವಾದ ಕಾರಣಗಳೇನೂ ಇಲ್ಲ. ನಾವು ಜಾತಿರಹಿತ, ವರ್ಗರಹಿತ ಸಮಾಜ ನಿರ್ಮಾಣ ಮಾಡಲು ಇಚ್ಛಿಸುತ್ತೇವೆ. ಇತ್ತೀಚಿಗೆ ಅರುಣ ಕಾಂಬ್ಳೆ ಕೂಡ ಇದೇ ಮಾತುಗಳನ್ನಾಡುತ್ತಿದ್ದಾರೆ. ಆದರೆ ಮರಾಠವಾಡ ವಿಶ್ವವಿದ್ಯಾನಿಲಯದ ಪುನರ್ ನಾಮಕರಣ ಚಳುವಳಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದ ಈತ ಕ್ರಮೇಣ ದಲಿತರಿಗೆ ಸಮಸ್ಯೆಗಳನ್ನೇ ತಂದೊಡ್ಡಿದ. ಉದಾ: ನೋಡಿ, ದಲಿತರಿಗೆ ಪ್ರತ್ಯೇಕ 'ದಲಿತಸ್ಥಾನ'ದ ಕರೆ ? ಇಂಥವುಗಳಿಗಾಗಿ ನಾವು ಅವರನ್ನು ವಿರೋಧಿಸಿದೆವು.

* ನಿಮ್ಮ ಮೊದಲ ಕವನ ಸಂಕಲನ 'ಗೋಲ್‌ಪೀಠ' ಮರಾಠಿ ಸಾಹಿತ್ಯದಲ್ಲಿ ಒಂದು ಚರಿತ್ರಾರ್ಹ ದಾಖಲೆ ಎಂದು ಪರಿಗಣಿಸಲಾಗಿದೆ. ನಿಮ್ಮನ್ನು ನೀವು ಮೂಲಭೂತವಾಗಿ ಕವಿ ಎಂದು ಭಾವಿಸುತ್ತಿರೊ ಅಥವಾ ರಾಜಕೀಯ ವ್ಯಕ್ತಿ ಎಂದೊ ? ಜೊತೆಗೆ ನೀವು ಕವಿಯಾಗಿ ಹೆಚ್ಚು ನೆನಪಿನಲ್ಲಿ ಉಳಿಯುತ್ತಿರೊ ಅಥವಾ ದಲಿತ ಪ್ಯಾಂಥರ್ ಸಂಸ್ಥಾಪಕರಲ್ಲೊಬ್ಬರಾಗಿಯೊ ?

ನಾನು ಕವಿಯೆಂದು ಭಾವಿಸುವುದು ಮುಖ್ಯವೊ ಅಥವಾ ರಾಜಕೀಯ ವ್ಯಕ್ತಿಯೆಂದು ಭಾವಿಸುವುದು ಮುಖ್ಯವೊ ನನಗೆ ಗೊತ್ತಿಲ್ಲ. ನಾನು ನನ್ನ ಬದುಕಲ್ಲಿ ಎದುರಿಸಿದ ನೋವುಗಳಿಂದಾಗಿ, ನನ್ನ ವೈಯಕ್ತಿಕ ಅಗತ್ಯವಾಗಿ ಈ ಹೋರಾಟದ ದಾರಿಯನ್ನು ಹಿಡಿದೆ. ಮತ್ತೊಂದು ಕಡೆ ಕಾವ್ಯ ವ್ಯಕ್ತಿಯ ಮನಸ್ಥಿತಿ ಅಭಿವ್ಯಕ್ತಿಯ ಸಾಧನ. ಆದ್ದರಿಂದ ನನ್ನ ಮನಸ್ಸಿಗೆ ಕಾವ್ಯವಸ್ತು ಹೋರಾಟ ಪರಸ್ಪರ ಪೂರಕ ಅಂಶಗಳು. ಇವುಗಳನ್ನು ಪರಸ್ಪರ ವಿರುದ್ಧಾತ್ಮಕಗಳನ್ನಾಗಿ ನಾನು ನೋಡುವುದಿಲ್ಲ. ಯಾವನೇ ವ್ಯಕ್ತಿ ತನ್ನ ಅಸಂತೋಷವನ್ನು ಕಳೆದು ಕೊಳ್ಳುವುದಕ್ಕಾಗಿ ಸಾಮಾಜಿಕ ಹೋರಾಟಕ್ಕೆ ಸೇರುತ್ತಾನೆ. ಕಾವ್ಯ ಕೂಡ ಅನೇಕ ವೇಳೆ ಅಸಂತೋಷವನ್ನು ವ್ಯಕ್ತಪಡಿಸುತ್ತದೆ.

ಕೃಪೆ : **ದಿ ಸಂಡೆ ಅಬ್‌ಸರ್ವರ್**

(ಮುಂದುವರಿಯುವುದು)

ಹೊಲ್ಮಾದಿಗರು ಹೋಟ್ಲ್ ಇಟ್ರೆ ಜನ ಬರ್ತ್ತಾರಾ ?

ಚಿಕ್ಕಮಗಳೂರಿನ ಒಂದು ಗಲ್ಲಿ ರೋಡಿನಲ್ಲಿನ ಒಂದು ಮಿಲಿಟರಿ ಹೋಟೆಲ್‌ನಲ್ಲಿ ಕುಳಿತ್ತಿದ್ದೆ. ಅದು ಬೋರ್ಡ್ ಇರದ ದನದ ಮಾಂಸ ಸಿಗುವಂತಹ ಲೈಸನ್ಸ ಇಲ್ಲದೆ ನಡೆಯುವ ಹೋಟೆಲ್. ಅಂದು ಭಾನುವಾರ ಎಲ್ಲಾ ಪುಳಿಚಾರ್ ಹೋಟೆಲ್‌ಗಳು ರಜಾ ಆಗಿದ್ದುದರಿಂದಲೂ ದನದ ಮಾಂಸದ ಫ್ರೈ ತಿನ್ನಬೇಕು ಅನ್ನಿಸಿದ್ದರಿಂದಲೂ ಕಾಕತಾಳೀಯವಾಗಿ ಅಲ್ಲಿಗೆ ಹೋಗಿದ್ದೆ. ಅಲ್ಲಿ ಇರುವವರನ್ನು ಗಮನಿಸದೆ ನಾನು ನನ್ನಷ್ಟಕ್ಕೆಪರೋಟಾ ತಿನ್ನುತ್ತಾ ಕುಳಿತೆ. ಆ ಹೋಟೆಲ್ಲಿಲ್ಲಿ ಒಬ್ಬ ಹುಡುಗ ಎಂಜಲು ತಟ್ಟೆಯನ್ನು ತೊಳೆದು ತಂದಿಟ್ಟ. ಕಪ್ಪಗಿದ್ದು, ಕೊಳೆ ಬಟ್ಟೆಧರಿಸಿದ್ದ. ಅವನ ಬಗ್ಗೆ ಸಪ್ಲೈಯರ್, ಅಡಿಗೆಯವನ ಬಳಿ ತು ಳು ಭಾ ಷೆ ಯಲ್ಲಿ "ಆಯೇ ದಿಕ್ಕೆ ಅತ್ತಾ ಮಾರಾಯ್ರೆ" (ಅವನು ಹೊಲೆಯ ಅಲ್ವಾ ಮಾರಾಯ್ರೆ) ಎಂದ. ಅದಕ್ಕೆ ಅಡಿಗೆಯವನು "ದಿಕ್ಕೆನಾ, ಕುಕ್ಕೆನಾ ನಿಕ್ಕದೇಗ್, ಪೊಕ್ಕಡೆ ಬೇಲೆ ಮಲ್ಪು" (ಹೊಲೆಯನೊ, ಮಾದಿಗನೊ ನಿನಗ್ಯಾಕೆ ಸುಮ್ಮನೆ ಕೆಲಸ ಮಾಡು) ಎಂದ.

ನನ್ನ ಮುಂದುಗಡೆ ಕುಳಿತಿದ್ದ ಇಬ್ಬರು ಹುಡುಗರಲ್ಲಿ ಒಬ್ಬ ಇನ್ಮೇಲೆ ಇಲ್ಲಿಗೆ ಬರ್‍ಬಾರ್‍ದು ಮಾರಾಯ ಹೊಲೆರ್‍ನೆಲ್ಲಾ ಕೆಲ್ಸಕ್ಕೆ ಇಟ್ಕಂಡಿದ್ದಾರೆ ಇಲ್ಲಿ, ಎಂದ. ನಾನು ತಲೆತಗ್ಗಿಸಿಕೊಂಡು ತಿನ್ನುತ್ತಿದ್ದವನು ಯಾರಪ್ಪಾ ಈ ಮಡಿವಂತ ಎಂದು ತಲೆ ಎತ್ತಿ ನೋಡಿದೆ. ಅದೂ ಯಾರೂ ಆಗಿರದೆ ಹಿಂದೊಮ್ಮೆ ದನದ ಮಾಂಸದ ಅಂಗಡಿ, ಹೋಟೆಲ್ ಸೀರ್ಝ್ ಮಾಡ್ತಾ ,ಪೋಲಿಸ್‌ನವರು ಓಡಾಡ್ತಾ ಇದ್ದಾಗ ನನ್ನ ಜೊತೆಗೇನೆ ಚರ್ಚೆಮಾಡಿ ದನದ ಮಾಂಸ ತಿನ್ನೋರ್‍ನ್ನ Hate ಮಾಡುತ್ತ ಹೋದಂತ ಒಬ್ಬ ಬ್ರಾಹ್ಮಣ, ಇನ್ನೊಬ್ಬ ಲಿಂಗಾಯಿತ ಆಪ್ತ ಸ್ನೇಹಿತರು. ನನಗೆ ನೋಡಿ ಬಹಳ ಆಶ್ಚರ್ಯ ಆಯ್ತು. ಮಾತಾಡ್ಸೋಣ ಅಂತ ಯೋಚ್ನೆ ಮಾಡ್ದೆ. ಪಾಪ ಕುಡಿದ ಅಮಲು ಏರಿದ್ದರಿಂದ ಎದುರುಗಡೆ ಕುಳಿತಿದ್ದ ನನ್ನನ್ನು ಗಮನಿಸೋ ಸ್ಥಿತಿಲಿರಲಿಲ್ಲ, ಸುಮ್ಮನಾದೆ.

ಪಾಪ ಬ್ರಾಹ್ಮಣ ಹುಡುಗ ಮಂಗಳೂರು ಕಡೆಯವ ತುಳುಭಾಷೆ ಬತ್ತಾ ಇತ್ತು. "ದಿಕ್ಕೆ" ಎಂಬ ಪದ ಅವನ ಮೆದುಳಿಗೆ ನೇರವಾಗಿ ಹೊಡೆದಿತ್ತು ಅನ್ಸುತ್ತೆ, ಮನಸ್ಸು ತಡೆಯದೆ ಸಪ್ಲೈಯರ್ ನನ್ನು "ಇಡೆ ಬಲಾಮರಾಯ" (ಇಲ್ಲಿಗೆ ಬಾ ಮಾರಾಯ) ಎಂದ. ಸಪ್ಲೈಯರ್, ಎನಬೇಕ್ ಸಾರ್ ಅಂತ ಬಂದ. ಬ್ರಾಹ್ಮಣ ಹುಡುಗ, "ದಾನೆ ಮಾರಾಯ ದಿಕ್ಕೆ ನಕ್ಲೇಗ್ ಮಾತಾ ಹೋಟೆಲ್‌ಡ್ ಬೇಲೆಗ್ ದೀವೊ, ನ್ವಾರಾ" (ಏನ್ ಮಾರಾಯ ಹೊಲೆರ್‍ನೆಲ್ಲಾ ಹೋಟ್ಲಲ್ಲಿ ಕೆಲ್ಸಕ್ಕೆ ಇಟ್ಕೊತಾರ ಎಂದು ಜೋರಾಗಿ ಕೇಳಿದ. ತಕ್ಷಣ ಎಚ್ಚೆತ್ತ ಸಪ್ಲೈಯರ್ ನಗುತ್ತಾ "ಇಜ್ಜೀ ...ಅಯೆ ದಿಕ್ಕೆ ಅತ್ ಪೊಕ್ಕಡೆ ಕುಶಾಲೆಗ್ ಪಣ್ತಿನ ಆತೆ" (ಇಲ್ಲಾ ಅವನು ಹೊಲೆಯ ಅಲ್ಲಾ ಸಮ್ಮನೆ ತಮಾಷೆಗೆ ಹೇಳಿದ್ದು ಅಷ್ಟೆ.) "ಆಯೆ ಲಿಂಗಾಯ್ತೆ (ಅವನು ಲಿಂಗಾಯತ) ಎಂದ. ಅಷ್ಟೊತ್ತು ತುಳು ಅರ್ಥವಾಗದೆ ಸುಮ್ಮನೆ ಕೂತಿದ್ದ ಲಿಂಗಾಯತ ಹುಡುಗನಿಗೆ ಲಿಂಗಾಯತ ಎಂದದ್ದು ಮಾತ್ರ ಅರ್ಥವಾಗಿ, ಏನ್‌ಮಾರಾಯ ಲಿಂಗಾಯತ ಅಂತ ಸುಳ್ಳು ಬೇರೆ ಹೇಳ್ತಿಯೂ ಅಂದ ರೋಪು, ಹಾಕುವವನಂತೆ. ಕೂಡಲೇ ಹೋಟೆಲ್ ಸಾಹುಕಾರ ಸಪ್ಲೈಯರ್‌ನನ್ನು ಕರೆದು ಎಲ್ಲಿಗೊ ಹೊರಗೆ ಕಳಹಿಸಿದ. ಇವರಿಬ್ಬರದ್ದೂ ಊಟ ಆಗಿ ಕೈ ತೊಳೆದು ಹೊರಟರು.

ಅನುಭವದ ಗಣಿಯಿಂದ

ಅವರಿಬ್ಬರೂ ಹೋದ ನಂತರ ಸಪ್ಲೈಯರ್ ಬಂದ. ಅವನನ್ನು ನಾನು ಹತ್ತಿರ ಕರೆದು ತುಳುನಲ್ಲಿಯೆ "ಅತ್ ಮಾರಾಯ್ರೆ ಅಕ್ಲರಡ್ ಜನೊ[illegible] ದಿಕ್ಕೆ ಅಂದ್ ಪಂಡಿನ ದಾನೆ ಅಂಡೆಗೆ" ([illegible] ಮಾರಾಯ್ರೆ ಅವ್ರು ಎರಡು ಜನಕ್ಕೆ ಹೊಲೆಯ ಅ[illegible] ಹೇಳಿದ್ದು ಏನಾಯ್ತಂತೆ) ಎಂದೆ. ತಕ್ಷಣ ಅವ[illegible] ತುಳುಭಾಷೆಯಲ್ಲಿಯೆ ಹೇಳ್ದ. ಇಲ್ಲಾ ಸಾ[illegible] ಅಹುಡುಗನ ಕೊಳೆ ಬಟ್ಟೆ ನೋಡಿ ತಮಾಷೆ ಮಾ[illegible] ಅವರು ನಿಜ ಅಂತ ತಿಳಿದ್ರು. ಅದಕ್ಕೆ ಸಾವುಕಾ[illegible] ಗಲಾಟೆ ಆಗಬಹುದು ಅಂತ ನನ್ನ ಹೊರಗೆ [illegible] ಸಿದ್ರು. ಯಾಕೆಂದ್ರೆ ಅವ್ರಿಬ್ರೂ ನಮಗೆ ಖಾಯ[illegible] ಗಿರಾಕಿಗಳು. ಅದಕ್ಕೆ ನಾನು "ಅಲ್ಲಾರಿ ನ[illegible] ಆ ಹುಡುಗ ಯಾರು ಅಂತನೂಗೊತ್ತು ಅವರಿಬ[illegible] ಯಾರು ಅಂತಾನು ಗೊತ್ತು. ಹೊರಗಡೆ [illegible] ಮಾಂಸ ತಿನ್ನೋರ್‍ನ್ನ ಬಯ್ತಾರೆ, ಇಲ್ಲಿ ಬಂ[illegible] ಅದನ್ನೆ ತಿನ್ತಾರೆ." ಎಂದೆ.

"ನೋಡಿ ಸಾರ್ ನಮ್ಮ ಹೋಟ್ಲಗೆ [illegible] ವಾಗಿ ಯಾರು ತಿನ್ತಾರೆ ಅಂತ ಪ್ರಚಾರ ಇದೆಯ[illegible] ಅವರು ಬರದೆ ಮಡಿವಂತ್ರೆ ಹೆಚ್ಚಾಗಿ ಬತ್ತಾ[illegible] ಅದೂ ಅಲ್ದೇನೆ ಬರ್‍ಬೇಕಾದ್ರೆ ಆ ಕಡೆ, ಈ[illegible] ನೋಡ್ಕಂಡು ಯಾರು ನೋಡ್ತ ಇಲ್ಲಾ ಅಂ[illegible] ಗ್ಯಾರಂಟಿ ಮಾಡಿಕೊಂಡು ಚಕ ಅಂತ ಒ[illegible] ಬತ್ತಾರೆ. ಅದೂ ಅಲ್ದೆ ಇದು ಓಣೀಲಿರೋದ್ರಿ[illegible] ನಮ್ಮ ಹೋಟ್ಲವ್ರಿಗೆ ಬಿಟ್ರೆ ಅವರ ಬಂಡ[illegible] ಯಾರಿಗೂ ಗೋತ್ತಾಗೊಲ್ಲ. ಹಾಗಾಗಿ ನಾ[illegible] ಅವ್ರಂತೆನೇ ಇರ್‍ತೇವೆ. ಇವತ್ತು ಅಕಸ್ಮಾತ್[illegible] ಮಾತಾಡ್ಬಿಟ್ಟೆ ಬಾಯ್ತಪ್ಪಿ." ಎಂದ.

ಆಗ ನನಗನ್ನಿಸಿತು ಹೋಟೆಲ್‌ನಲ್ಲಿ ಬ[illegible] ಕ್ಲೀನರ್ ಕೆಲ್ಸ ಮಾಡ್ಕೊಂಡು ಇದ್ರೇನೆ ಹೀ[illegible] ಡೋರು, ಅಕಸ್ಮಾತ್ ಹೊಲ ಮಾದಿಗ್ರೇನಾದ[illegible] ಹೋಟೆಲು ಇಟ್ರೆ ಜನಾ ಬರ್‍ತಾರಾ ?

—ಜಿ ಸಿ. ಶೇಖ[illegible]

ನೇರಲಕೆರೆಯಲ್ಲಿ ದೌರ್ಜನ್ಯ

(5ನೇ ಪುಟದಿಂದ)

ಇತ್ತ ಬೆಂಕಿಯಿಡುತ್ತಿದ್ದಂತೆ ಅತ್ತ ಅರಕೆರೆ ಪೋಲೀಸ್ ಠಾಣೆಗೆ ಹೋದ ಸವರ್ಣೀಯರು 'ಹೊಲೆಯರು ಅವರನರೇ ಕಚ್ಚಾಡಿಕೊಂಡು ಬೆಂಕಿ ಹಾಕಿಕೊಳ್ಳುತ್ತಿದ್ದಾರೆ' ಎಂದು ದೂರು ಕೊಟ್ಟು ಬಂದರು. ತಕ್ಷಣ ಸಾಕಷ್ಟು ಸಂಖ್ಯೆಯಲ್ಲಿ ಪೋಲೀಸರು ಅಧಿಕಾರಿಗಳೊಡನೆ ಧಾವಿಸಿದರು. ಆ ಹೊತ್ತಿಗೆ ಗುಡಿಸಲುಗಳು ಸುಟ್ಟಾಗಿತ್ತು. ಅಲ್ಲಿ ಹರಿಜನರು ದೂರು ಹೇಳಿಕೊಂಡರು. ಪರಿಶೀಲನೆಯ ನಂತರ 16 ಮಂದಿ ಸವರ್ಣೀಯರನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡಲಾಯಿತು.

ಈ ಮೊದಲು ಸವರ್ಣೀಯರಲ್ಲಿ ಒಳಜಾತಿ ಹಾಗೂ ರಾಜಕೀಯ ಆಧಾರಗಳ ಮೇಲೆ ಬಿರುಕು ಗಳಿದ್ದವು, ಗಣನೀಯ ಒಡಕುಗಳಿದ್ದವು. ಈಚಿಗೆ ರೈತ ಸಂಘ ಆರಂಭವಾದ ಮೇಲೆ ಆ ಬಿರುಕುಗಳು ಮಾಯವಾಯಿತು. ಕುಸಿದು ಬಿದ್ದ ಹರಿಜನರು ಮುಂದೆ ಬರುವ ಬಗ್ಗೆ ಹೆಮ್ಮೆ ಪಟ್ಟು ಅವರಿಗೆ ಇಂಬಾಗುವ ಬದಲು ಆ ಸಂಘಟಿತ ಶಕ್ತಿ ಅವರನ[illegible] ಇನ್ನಷ್ಟು ನೆಲಕ್ಕೆ ತುಳಿಯಲು ಸಹಾಯವಾದು[illegible] ಆದರ್ಶದ ವಿಪರ್ಯಾಸ. ರೈತ ಹೋರಾಟವನ[illegible] ವರ್ಗ ಹೋರಾಟ ಎನ್ನಬಹುದೆ? ಅಲ್ಲಿನ ಹಿಂದು[illegible] ದವರ ಪಾಡೇನು ? ವರ್ಗ ಸಂಘರ್ಷ-ಜಾ[illegible] ಸಂಘರ್ಷ-ಇವುಗಳೊಳಗಿನ ಸಂಘರ್ಷ-ಚರ್ಚೆಯ[illegible] ವಸ್ತುವಾಗಬಲ್ಲುದು, ಆ ನಿಟ್ಟಿನತ್ತ ಈಚಿನ ಹಲ[illegible] ಹಲ್ಲಿಗಳು ನೇರಲಗೆರೆಯ ಘಟನೆಯಂತೆಯೇ ಬೆಳ[illegible] ಚೆಲ್ಲುತ್ತವೆ.

(ಕೃಪೆ : ಆಂದೋಳನ)

...ಂಡಪಾಳಶಾಹಿಗಳನ್ನು ಬಚಾವು ಮಾಡಿದ ಕಾನೂ...

1961 ರ ಕಾನೂನಿನ ಪ್ರಕಾರ 5 ಮಂದಿ ...ವ ಸಂಸಾರವನ್ನು ಒಂದು ಫ್ಯಾಮಿಲಿ ಯೂನಿ...ರು ಮಿತಿ ತಂದಿತು ಒಂದು ಸ್ಟ್ಯಾಂಡರ್ಡ್ ...ರೆ ಎಂದರೆ 8 ಎಕರೆ ಹೊಲಕ್ಕೆ ಸಮ. ಅಲ್ಲದೆ ... ಮಂದಿಗಿಂತ ಹೆಚ್ಚು ಇರುವ ಕುಟುಂಬದಲ್ಲಿ ...ಯೊಬ್ಬನೂ ಸ್ಟ್ಯಾಂಡರ್ಡ್ ಎಕರೆಯಷ್ಟು ...ೀನನ್ನು ಹೊಂದಿರಬಹುದು ಅಂದರೆ ಹತ್ತು ...ದಿ ಇರುವ ಕುಟುಂಬವೊಂದು (18+24 ...42×8 = 336) 336 ಎಕರೆ ಹೊಲವನ್ನು ...ಟ್ಟುಕೊಳ್ಳಲು ಅವಕಾಶವಿತ್ತು. ಆದರೆ 1974 ... ಬಂದ ಕಾನೂನು ತಿದ್ದುಪಡಿಯಾಗಿ ಒಂದು ...ಾರ 10 ರಿಂದ 12 ಎಕರೆಗಳಷ್ಟು ತರಿ ...ೀನನ್ನು ಒಂದು ಬೆಳೆಯ ನೀರಾವರಿ ಜಮೀ...ದರೆ 18 ಎಕರೆಗಳಷ್ಟನ್ನೂ ಖುಷ್ಕಿಯಾದರೆ 54 ...ರೆಗಳನ್ನೂ ಇಟ್ಟುಕೊಳ್ಳಬಹುದೆಂದು ತೀರ್ಮಾನ...ಯಿತು.

...ಣಿಯಿಂದ, ವಾರಕ್ಕೆ—ವಾರದಿಂದ ಕೂಲಿಗೆ

... ಭೂ ಒಡೆತನದ ಬಗ್ಗೆ ತಂದ ಈ ಮಿತಿಗಳನ್ನು ...ಡಿದಾಗ ಹಲವಾರು ಪ್ರಶ್ನೆಗಳು ಹುಟ್ಟುತ್ತವೆ ...52 ರಲ್ಲಿ ಜತ್ತಿ ಕಮಿಟಿ ರಿಪೋರ್ಟನ್ನು ಕಾರ್ಯ... ಮಾಡಿದಾಗ ಸ್ವತಃ ಉಳುಮೆ ಮಾಡುವವನೇ ... ಒಡೆಯನಾಗಬೇಕು ಅನ್ನುವ ಅಂಶವನ್ನು ಜಾರಿಗೊಳಿಸಲು ಹೆಚ್ಚಿನ ಒತ್ತು ಕೊಡಲಾಯಿತು. ಇಲ್ಲಿ ಬರುವ ದ್ವಂದ್ವವೆಂದರೆ ಒಂದು ಕುಟುಂಬ ಸ್ವತಃ ಉಳುಮೆ ಮಾಡಿದರೆ ಖಂಡಿತ 336 ಎಕರೆ ವ್ಯವಸಾಯ ಮಾಡಲು ಸಾಧ್ಯವಾಗುವುದಿಲ್ಲ.

ಭೂ ಸುಧಾರಣ ಚರಿತ್ರೆ-5

—ಕ್ಷೀರಸಾಗರ

ಇಷ್ಟೊಂದು ಅವಕಾಶ ಇರುವ ಮಿತಿ, ಬೇರೆ ಬೇರೆ ರೀತಿಯ ವ್ಯವಸಾಯದ ರೂಪಗಳಿಗೆ ಅವಕಾಶ ಮಾಡಿಕೊಡಲೇಬೇಕಾಗುತ್ತದೆ. ಗೇಣಿ ವ್ಯವಸ್ಥೆಯನ್ನು ಕಿತ್ತುಹಾಕಿರುವುದರಿಂದ 'ವಾರ' ಮತ್ತು Piece Contract ಮೂಲಕ ವ್ಯವಸಾಯ ಮಾಡಲು ಅನುವು ಮಾಡಿಕೊಟ್ಟವು ಒಂದು ರೀತಿಯಲ್ಲಿ ನೋಡುವುದಾದರೆ ಗೇಣಿ ಪದ್ಧತಿಯೇ 'ವಾರ'ಕ್ಕಿಂತ ಗೇಣಿದಾರನಿಗೆ ಹೆಚ್ಚಿನ ಉತ್ಪಾದನೆಗೆ ಅವಕಾಶ ಮಾಡಿಕೊಡುತ್ತಿತ್ತು. ಕ್ರಮೇಣ ಗೇಣಿದಾರ 'ವಾರ'ಕ್ಕೆ ವ್ಯವಸಾಯ ಮಾಡುವಂಥ ಇನ್ನೂ ಹೆಚ್ಚಿನ ಶೋಷಣೆಗೆ ಒಳಗಾಗಬೇಕಾಯಿತು. ಇದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋದರೆ Piece Contract ಅಂದರೆ ವಾರಕ್ಕೆ ಮಾಡುವ ರೈತ ಕೃಷಿ ಕಾರ್ಮಿಕನಾಗ ಬೇಕಾದಂಥ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಂತಾಯಿತು. ಈ ರೀತಿ ಹೆಚ್ಚಿನ ಭೂಮಿ ಇಟ್ಟುಕೊಳ್ಳಲು ಅವಕಾಶ ಕೊಟ್ಟ ಕಾನೂನು ಗೇಣಿದಾರನನ್ನು ಕ್ರಮೇಣ ಕೃಷಿ ಕಾರ್ಮಿಕನ ಮಟ್ಟಕ್ಕೆ ದೂಡಲು ಕಾರಣವಾಗುತ್ತ ಹೋಯಿತು.

1974 ರಲ್ಲಿ ಭೂ ಒಡೆತನಕ್ಕೆ ಹೆಚ್ಚಿನ ಮಿತಿ ಹೇರಿ ಇಂಥ ಅಧಃಪತನದಿಂದ ಮೇಲೆತ್ತಲು ಸಹಾಯವನ್ನೇನೂ ಮಾಡಲಿಲ್ಲ. ಯಾಕೆಂದರೆ 'ವಾರ'ಕ್ಕೆ ವ್ಯವಸಾಯ ಮಾಡುವ ರೈತನಿಗೆ ಈ ಕಾನೂನಿನಲ್ಲಿ ಯಾವುದೇ ರೀತಿಯ ರಕ್ಷಣೆ ಇಲ್ಲ. ಉಳುವವನೆ ಭೂಮಿಯ ಒಡೆಯ ಎಂದಾಗ ಉಳುವ ಒಡೆಯ ಮತ್ತು ಉಳುವ ಗೇಣಿದಾರ ಮಾತ್ರವೆ ಭೂಮಿಯ ಒಡೆತನ ದಕ್ಕಿಸಿಕೊಳ್ಳಬಲ್ಲರು ಹೊರತು 'ವಾರ'ಕ್ಕೆ ದುಡಿಯುವ ರೈತನಾಗಲಿ ಕೂಲಿಗೆ ದುಡಿಯುವ ಕೃಷಿ ಕಾರ್ಮಿಕನಾಗಲಿ ಹಾಕುವ ಶ್ರಮ ಅವರ ಉಳುಮೆ ಇವರಿಗೆ ಒಡೆತನವನ್ನು ತಂದುಕೊಡುವುದಿಲ್ಲ. ಇಂಥ ದೊಡ್ಡ ಮೋಸದ ಬಲೆಯಿಂದ ದಿನದಿನಕ್ಕೆ ಬಡರೈತ ನೆಲಕ್ಕೆ ಕುಸಿಯುತ್ತಿದ್ದಾನೆ.

...ಪ್ರಾಮಾಣಿಕ ಅಧಿಕಾರಿಗಳಿಗೆ ಮುಳ್ಳಾಗಿರುವ ಹುಣಸೂರಿನ ತರಲೆ ರಾಜಕೀಯ

ಈ ದೇಶದ ಕೊಳಕು ರಾಜಕೀಯ, ಸ್ವಜನ...ಪಾತ, ಲಂಚಕೋರತನಗಳ ಜೊತೆಗೆ ಜಾತಿ...ತೆಯ ತೌರುಮನೆಯಾದರೂ ಅಲ್ಲಲ್ಲಿ ದಲಿತರ ...ಪಡಿಗಳಿಂದ ಚಿಗುರೊಡೆದು ಹೊಟ್ಟೆಬಟ್ಟೆ ... ವಿದ್ಯಾವಂತರಾದ ಶೇ. 2ರಷ್ಟು ಯುವಕರು ...ರ್ಕಾರಿ ಅಧಿಕಾರಿಗಳಾಗಿದ್ದು ತಮ್ಮ ಕರ್ತವ್ಯ...ಷ್ಠೆ ಮತ್ತು ನೋವಿನ ಅರಿವಿನೊಟ್ಟಿಗೆ ಬಡವರ ...ರುಪಾರು ಕೆಲಸ ಮಾಡಲು ಪ್ರಯತ್ನಿಸಿದರೆ ...ರಲ್ಲೂ ಅಂಥವರು ಹೊಲೆಯ–ಮಾದಿಗ ಜನಾಂ... ಸೇರಿದವರಾಗಿದ್ದರೆ ಅವರಿಗೆ ಉಳಿಗಾಲವಿಲ್ಲ ...ಬುದಕ್ಕೆ ಹುಣಸೂರು ತಾಲ್ಲೂಕು ನಿದರ್ಶನ...ಗಿದೆ.

ದಲಿತ ಬಿ.ಡಿ.ಓ. ಒಬ್ಬರು ಇಲ್ಲಿಗೆ ವರ್ಗವಾಗಿ...ದಾಗ ಅಧಿಕಾರ ವಹಿಸಿಕೊಳ್ಳಲು ಬಿಡಲಿಲ್ಲ. ...ರಾದ ಡಾಕ್ಟರೊಬ್ಬರನ್ನು ಒಂದು ವರ್ಷದೊಳಗೆ ...ಲಿ ಮಾಡಿಸಲಾಯಿತು. ಸಹಕಾರ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೃಷ್ಣದಾಸ್, ಅಂಗನವಾಡಿ ಕೇಂದ್ರಗಳ ರಾಜು, ಹಾಗೂ ಪ್ರಾಮಾಣಿಕ ಡಿವೈಎಸ್ಪಿ ಮೋತಿರಾಂ ಇವರೆಲ್ಲ ದಲಿತರು ಎಂಬ ಒಂದೇ ಕಾರಣಕ್ಕೆ ಭ್ರಷ್ಟರಾಜಕಾರಣಿಗಳು ಇಲ್ಲಿ ಉಳಿಯಗೊಡಲಿಲ್ಲ. ಕೆಲವೇ ತಿಂಗಳುಗಳ ಹಿಂದೆ ಬಿ.ಡಿ.ಓ. ಆಗಿ ಬಂದ ಶಿವರಾಮು ಬಡಜನರ ಜೊತೆ ನೇರ ಸಂಪರ್ಕವಿಟ್ಟು ಕೆಲಸ ಮಾಡತೊಡಗಿದ್ದಾಗ ಅಲ್ಲಿಯ ಗೂಳನಾಯ್ಕ ಎಂಬ ಲೋಕಲ್ ಪುಡಾರಿ ಅದನ್ನು ಸಹಿಸದೆ ಎಲ್ಲಾ ಕಂಟ್ರಾಕ್ಟರುಗಳನ್ನು ತನಗೆ ಕೊಡಬೇಕೆಂದು ಒತ್ತಾಯಿಸುವುದು, ಕೆಲಸ ಆಗದಿದ್ದರೂ ಪೂರ್ತಿಹಣ ಪಾವತಿಸಲು ಒತ್ತಾಯಿಸುವುದು, ಅನಗತ್ಯವಾಗಿ ಕಛೇರಿಯಲ್ಲಿ ಕೂತುಕೊಳ್ಳುವುದು ಇತ್ಯಾದಿ ತರಲೆಗಳನ್ನು ಪ್ರಾರಂಭಿಸಿದ್ದಾನೆ. ಬಡಜನರ ಸೇವೆಗೆ ನಿಷ್ಠರಾಗಿರುವ ಶಿವರಾಮುರಂತಹವರನ್ನು ಉಳಿಸಿಕೊಳ್ಳುವತ್ತ ಗಮನ ಹರಿಸದೆ ಗೂಳನಾಯ್ಕನ ಗೂಂಡಾ ರಾಜಕೀಯಕ್ಕೆ ಬೆಲೆಕೊಟ್ಟು ಮೇಲಿನ ರಾಜಕಾರಣಿಗಳು ಶಿವರಾಮುರವರನ್ನು ಎತ್ತಂಗಡಿ ಮಾಡಿಸುತ್ತಿರುವ ಬಗ್ಗೆ ಹುಣಸೂರಿನ ಬಡಜನತೆ ಕ್ರೋಧರಾಗಿದ್ದು ಇದೇ ಪ್ರವೃತ್ತಿ ಮುಂದುವರಿದರೆ ಚಳುವಳಿಯ ಮಾರ್ಗ ತುಳಿಯುವುದಕ್ಕೆ ಹಿಂಜರಿಯುವುದಿಲ್ಲವೆಂದು ತಿಳಿಸಿದ್ದಾರೆ.

ದಲಿತ ಮಹಿಳಾ ಒಕ್ಕೂಟದ ರಚನೆ

ದಲಿತ ಸಂಘರ್ಷ ಸಮಿತಿ ಅವಿಭಾಜ್ಯ ಅಂಗವಾಗಿ ರಾಜ್ಯಮಟ್ಟದ ದಲಿತ ಮಹಿಳಾ ಒಕ್ಕೂಟದ ಸ್ಥಾಪನೆಯನ್ನು ಮಾಡಲಾಗಿದೆ. ಈ ಒಕ್ಕೂಟದ ರಾಜ್ಯ ಸಂಚಾಲಕಿಯನ್ನಾಗಿ ಶ್ರೀಮತಿ ಗಂಗಮ .ತುಮಕೂರು ಇವರು ಆಯ್ಕೆಯಾಗಿದ್ದಾರೆ. ಅಲ್ಲದೆ ಜಿಲ್ಲಾ ಸಂಚಾಲಕಿಯರನ್ನಾಗಿ ಕೋಲಾರ ಜಿಲ್ಲೆ : ಕು|| ರತ್ನ, ಬೆಂಗಳೂರು ಜಿಲ್ಲೆ :ಶ್ರೀಮತಿ ಭಾರತಿ, ಮಂಡ್ಯಜಿಲ್ಲೆ: ಕು|| ಜಯಮ್ಮ, ಚಿಕ್ಕಮಗಳೂರು ಜಿಲ್ಲೆ : ಕು|| ಗಂಗಮ್ಮ ಹಾಗೂ ತುಮಕೂರು ಜಿಲ್ಲೆ : ಶ್ರೀಮತಿ ಗಂಗಮ್ಮ ಇವರನ್ನು ಆರಿಸಲಾಗಿದೆ.

ಜಾತಿ ಕೂಪದಲ್ಲಿ ಮುಳುಗುತ್ತಿರುವ ದಕ್ಷತೆ

ಶಿರಾದಲ್ಲಿ ದಲಿತ ಶಿಕ್ಷಕರ ಸಭೆ, ಅಲ್ಲಿನ ಒಂದು ಖಾಸಗಿ ಹಾಸ್ಟಲಿನಲ್ಲಿ ನಡೆದಿತ್ತು. ಸಭೆಮುಗಿಸಿ ಎಲ್ಲರೂ ಹೊರ ಬಂದಾಗ ಸಂಜೆಯಾಗಿತ್ತು. ಇಬ್ಬರು ಹೈಸ್ಕೂಲ್ ವಿದ್ಯಾರ್ಥಿಗಳು ಅಳುತ್ತಾ ಅಲ್ಲಿಗೆ ಬಂದರು. "ಅಯ್ಯೋ ನಮ್ಮನ್ನು ಸಾಯೋಹಂಗೆ ಹೊಡೀತಾರೆ, ಇನ್ನೂ ಇಬ್ಬರನ್ನು ಹೊಡೆದು ರೂಂನಲ್ಲಿ ಮಲಗಿಸಿದ್ದಾರೆ ಬನ್ನಿ" ಅಂತ ಕರೆದರು. ನಾವು ಯಾರು ಹೊಡೆದದ್ದೆಂದು ವಿಚಾರಿಸಿದೆವು. "ಹೊಡಿಸಿಕೊಂಡು ಇಲ್ಲಿಗೆ ಬಂದಿದ್ದೀರಾ ನಾಚಿಕೆ ಆಗಲ್ವ ಹಂಗೆ ಸ್ಟೇಷನ್‌ಗೆ ಹೋಗ್ರಿ" ಅಂತ ಕಳಿಸಿದೆವು. ಅವರಿಗೆ ಬಿದ್ದಿದ್ದ ಏಟುಗಳು, ಅಳುತ್ತಿದ್ದದ್ದು, ಹೊಡೆದು ಮಲಗಿಸಿದ್ದು—ಎಲ್ಲ ಮತ್ತೆ ಮತ್ತೆ ತಲೆಯಲ್ಲಿ ಕೊರೆಯ ಹತ್ತಿದವು. ಮನಸ್ಸು ನಿಲ್ಲದೆ ಸರ್ಕಾರಿ ಬಿ.ಸಿ.ಎಂ. ಹಾಸ್ಟಲಿಗೆ ನಾಲ್ಕು ಜನ ಹೋದೆವು. ಹುಡುಗನೊಬ್ಬ ನಡೆದದ್ದನ್ನು ಹೇಳಲು ಬಂದರೆ ಮಿಕ್ಕವರು ತಡೆದು, ಹೇಳಿದವರಿಗೆ ಮತ್ತೆ ಹೊಡೆತ ಬೀಳುತ್ತವೆಂಬ ಭಯ ವ್ಯಕ್ತಪಡಿಸಿದರು. ಅಷ್ಟು ಹೊತ್ತಿಗೆ ಪೋಲೀಸ್ ವ್ಯಾನ್ ಬಂದು, ಹೊಡೆದವರು ಸಿಕ್ಕಲಿಲ್ಲ ಅಂತ ಹೊಡೆಸಿಕೊಂಡ ನಾಲ್ಕೈದು ಜನರನ್ನು ತುಂಬಿಕೊಂಡು ಹೋದರು. ನಂತರ ಊರಲ್ಲಿ ಬೇರೆಯವರನ್ನು ವಿಚಾರಿಸಿದಾಗ ತಿಳಿದದ್ದು ಅಲ್ಲಿನ ಸರ್ಕಾರಿ ಹೈಸ್ಕೂಲ್ ಹೆಡ್ಮಾಸ್ಟರಿಗೂ ಮಿಕ್ಕ ಮೇಸ್ಟರುಗಳಿಗೂ ಪಾರ್ಟಿ. ಹೆಡ್ಮಾಸ್ಟರು ಎಸ್ಸಿ. ಅವರಿಗೆ ಸಪೋರ್ಟುಮಾಡ್ತಾರೆ ಅಂತ ಬಿಸಿಎಂ, ಎಸ್ಟಿ ಹುಡುಗರು, ಎಸ್ಸಿ (ಅಸ್ಪೃಶ್ಯ) ಹುಡುಗರಿಗೆ ಹೊಡೀತಾರೆ ಅಂತ. ಮೇಸ್ಟರುಗಳಿಗೆ ಪಾರ್ಟಿ ಆದರೆ ಹುಡುಗರಿಗೇನು ? ಹಾಗೆ ಯೋಚಿಸುತ್ತಾ ಊರೊಳಗೆ ಹೋದೆವು.

ಗೋಡೆಗಳ ಮೇಲೆಲ್ಲ ಬರವಣಿಗೆ ಇದ್ದವು "ಹೆಚ್.ಎಂ. ಕಳ್ಳ", "ಹೆಚ್.ಎಂ. ಮಾದಿಗ", ಹೆಚ್.ಎಂ ಹೆಂಡ್ತಿ ಉಳುಕಿ", ಹೆಚ್.ಎಂ ಹೆಂಡ್ತಿ ಕದಿರಿ", ಡೌನ್ ವಿತ್ ಹೆಚ್.ಎಂ", ಇನ್ನೂ ಮುಂತಾದ ಅಶ್ಲೀಲ ಗೋಡೆಬರಹಗಳಿದ್ದವು. ನಮ್ಮ ಕುತೂಹಲ ಹೆಚ್ಚಾಯ್ತು. ವಿಚಾರಿಸಲಾಗಿ, ಹೆಚ್. ಎಂ. ವಿರುದ್ಧ ಹುಡುಗರು ಮೆರವಣಿಗೆ ಗೋಡೆ ಬರಹ, ಶಾಲಾ ಬಂದ್ ಎಲ್ಲಾ ನಡೆಸಿದ್ದರು ಎಂದು ತಿಳಿಯಿತು. ಹೆಚ್. ಎಂ. ಮನೆಗೆ ಹೋದೆವು. ಅವರು ಇರಲಿಲ್ಲ. ಅವರ ಹೆಂಡತಿ ನಮ್ಮನ್ನು ಕರೆದು ತಮ್ಮ ನೋವುಗಳನ್ನು ಹೇಳಿಕೊಂಡರು ನಾವು ಇಲ್ಲಿ ಇರೋಕೆ ಬಿಡಲ್ಲ. ಗುಂಪು ಗುಂಪು ಹುಡುಗರು ಬರ್ತಾರೆ. ಅವಾಚ್ಯವಾಗಿ ಬಯ್ತಾರೆ. ಕಲ್ಲು ಹೊಡೀತಾರೆ ಮುಂತಾಗಿ ಹೇಳಿಕೊಂಡು ಗೋಳಾಡಿದರು. ಅಷ್ಟು ಹೊತ್ತಿಗೆ ಹೆಚ್. ಎಂ. ಬಂದರು.

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾ॥ ನನ್ನಿವಾಡದ ದಲಿತ ವೈ ರಾಮಯ್ಯ ಅವರು ಶಿರಾ ಸರ್ಕಾರಿ ಹೈಸ್ಕೂಲ್ ಹೆಡ್ಮಾಸ್ಟರ್, ದಕ್ಷ ಆಡಳಿತಗಾರ. ಎರಡೂವರೆ ವರ್ಷದಿಂದ ಶಿರಾಶಾಲೆ ಮಾದರಿ ಶಾಲೆಯಾಗಬೇಕೆಂದು ಶ್ರಮಿಸುತ್ತಿದ್ದಾರೆ. ಇವರ ಶ್ರಮಕ್ಕೆ ಸಹೋಪಾಧ್ಯಾಯರಿಂದ ಸಿಕ್ಕುತ್ತಿರುವ ಸಹಕಾರ ವಿದ್ಯಾರ್ಥಿಗಳಲ್ಲಿ ಜಾತಿ ವಿಷಬೀಜ ಬಿತ್ತನೆ. ಇವರು ಬಂದ ನಂತರ ಶಾಲೆಯಲ್ಲಿ ಶಿಸ್ತು ಮಾಡಿಸಲು ಯತ್ನಿಸಿದ್ದಾರೆ. ಸಾಮೂಹಿಕ ಕವಾಯತು, ಸಮವಸ್ತ್ರ ತೋಟಗಾರಿಕೆಗೆ ಪ್ರೋತ್ಸಾಹ, ತೆಂಗಿನ ಗಿಡಗಳನ್ನು ಹಾಕಿಸಿದ್ದು–ಹೀಗೆ. ಸಹೋಪಾಧ್ಯಾಯರುಗಳು ಟೀ ಅಂಗಡಿ ಬಳಿ ಕಾಲ ಕಳೆಯುತ್ತಿದ್ದದ್ದನ್ನು ತಪ್ಪಿಸಿದ್ದು. ಮನೆಯಲ್ಲಿ ಪಾಠಮಾಡ ಬಾರದೆಂಬ ಸುತ್ತೋಲೆ ಹೊರಡಿಸಿದ್ದು, ತರಗತಿ ಹಾಗೂ ಪಬ್ಲಿಕ್ ಪರೀಕ್ಷೆಗಳನ್ನು ಸ್ಟ್ರಿಕ್ಟ್ ಆಗಿ ನಡೆಸುವುದು, ವಿದ್ಯಾರ್ಥಿಗಳ ಯಾನಿಯನ್, ಕಲಾ ಮತ್ತು ವಿಜ್ಞಾನ ಅಸೋಷಿಯೇಷನ್, ಶೈಕ್ಷಣಿಕ ಪ್ರವಾಸ ಮುಂತಾದ ಚಟುವಟಿಕೆಗಳು ಇವರು ಬಂದ ನಂತರ ರೂಪುಗೊಂಡವು.

ಸ್ಟ್ರಿಕ್ಟ್ ಆಗಿ ಪರೀಕ್ಷೆ ನಡೆಸುವುದರಿಂದ ಕಾಪಿ ಹೊಡೆಯಲು ತೊಂದರೆ ಆಗಿ ಪಾಠದ ಹುಡುಗರ ರಿಸಲ್ಟ್ ಸರಿಯಾಗಿ ಬರದೆ ಮುಂದೆ ಪಾಠದ ದುಡಿಮೆಗೆ ತೊಂದರೆಯಾದೀತೆಂಬುದು ಇತರ ಉಪಾಧ್ಯಾಯರ ಹೊಟ್ಟೆಕಿಚ್ಚು ಸುತ್ತಲ ಗ್ರಾಮಾಂತರ ಶಾಲೆಯವರ ಪರೀಕ್ಷಾ ಕೇಂದ್ರವೂ ಇದ್ದುದ್ದರಿಂದ ಅವರದ್ದೂ ಇದೇ ಗೋಳು. ಎಲ್ಲಕ್ಕಿಂತ ಮುಖ್ಯವಾಗಿ ಅಸ್ಪೃಶ್ಯನೊಬ್ಬನ ಆಡಳಿತಕ್ಕೆ ಮಣಿಯುವುದೇ ಎಂಬ ಜಾತಿ ಭಾವನೆ. "ಮಾದಿಗರವನು ಹೇಳಿದಂಗೆ ನಾವ್ಯಾಕೆ ಕೇಳಬೇಕು ? ಅವರು ಎಲ್ಲಿರಬೇಕೋ ಅಲ್ಲಿರಬೇಕು. ಇಂತ ಪೋಸ್ಟಿಗೆ ಅವರ್ಯಾಕೆ ಬರಬೇಕು" ಇದು ಮರುಳಪ್ಪನವರ ಬಹಿರಂಗ ಹೇಳಿಕೆ. ಕಾಪಿ ಆಪಾದನೆಗೆ ಇಲಾಖೆ ತನಿಖೆಗಳು ನಡೆದು ಎನ್. ಎಲ್. ತಿಮ್ಮಯ್ಯ ಎಂಬುವರು ಈಗಾಗಲೇ ಕ್ಯಾತ್ಸಂದ್ರಕ್ಕೆ ಟ್ರಾನ್ಸ್‌ಫರ್ ಆಗಿದ್ದಾರೆ. ಇವುಗಳೆಲ್ಲವನ್ನು ಬಳಸಿ ವಿದ್ಯಾರ್ಥಿಗಳನ್ನೇ ಎತ್ತಿಕಟ್ಟಿ ಹೆಚ್. ಎಂ. ಮೇಲೆ ಗಲಾಟೆ ಮಾಡಿಸುವುದು. ಇದರ ಪ್ರಮುಖ ಪಾತ್ರದಾರಿ ಹತ್ತಿರದ ಊರಿನ, ಏಳುವರ್ಷದಿಂದ ಈ ಶಾಲೆಯಲ್ಲಿರುವ ಆರ್. ಮರುಳಪ್ಪ, ಇವರ ಕೂಟದಲ್ಲಿ 16 ವರ್ಷದಿಂದಿರುವ ಸಿ. ಟಿ. ದೊರೆಸ್ವಾಮಿ, ಕೆ. ಎಸ್. ರಾಜಣ್ಣ, ಎ. ಆರ್. ನಾಗರಾಜರಾವ್, ಟಿ.ಆರ್. ಪುಟ್ಟರುದ್ರಪ್ಪಗೌಡ ಮುಂತಾದವರು ಸೇರಿದ್ದಾರೆ.

ಇದರಲ್ಲಿ ಟ್ರಾನ್ಸ್‌ಫರ್ ಆದ ಉಪಾಧ
ಯರು, ಮನೆಗೆ ಪಾಠಕ್ಕೆ ಹೋಗುವ ಹುಡುಗ
ಟೀಪಾರ್ಟಿ ಇಟ್ಟುಕೊಂಡಿದ್ದರು. ಈ ಹೆಚ್. ಎ
ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಲ್ಲ. ಕಾ
ಹೊಡೆಸೊಲ್ಲ ಮುಂತಾಗಿ ಹೇಳಿ, ಟೀಪಾರ್ಟಿಯನ
ಬ್ರಾಂದಿ ಪಾರ್ಟಿಯಾಗಿ ಪರಿವರ್ತಿಸಿ ಮುಂದ
ಪೀಳಿಗೆಗೆ ದಾರಿತೋರಿಸಿದ್ದಾರೆ. ಹೆಚ್. ಎ
ಮೇಲೆ ಗಲಾಟೆ ಮಾಟುವಂತೆ ಪ್ರೇರೇಪಿಸಿದ್ದಾರ

ಪ್ರವಾಸ, ಗಣಪತಿಹಬ್ಬ ಯಾವುದೇ ಕಾಯ
ಕ್ರಮದಲ್ಲಿ ವ್ಯವಸ್ಥೆ ಎಲ್ಲ ಸಹೋಪಾಧ್ಯಾಯರದ
ಹೆಚ್. ಎಂ. ಮೇಲ್ವಿಚಾರಣೆ ಅಷ್ಟೆ. ಆದರೂ ಹ
ತಿಂದರು, ತಿಂಡಿಕದ್ದರು ಮುಂತಾಗಿ ದೂರು ಹು
ಸುತ್ತಾರೆ. ಮಿಠಾಯಿ ಹಂಚಿಕೆಯೊಂದರಲ್ಲಿ ಪಾ
ಮನೆ ಹುಡುಗರಿಗೆ ಹೆಚ್ಚು ಹಂಚಿ, ಮಿಕ್ಕವರ
ಚೂರು ಮಾಡಿ, ಕೊನೆಗೆ ಇಲ್ಲವೆಂದರು. ಮಿ
ಯಿ ಮಾಡಿದ್ದು ಹಂಚಿದ್ದು ಎಲ್ಲ ಅವರೆ. ದೂ
ಇವರ ಮೇಲೆ. ತರಗತಿಯಲ್ಲಿ ಮಕ್ಕಳಿಗೆ "ಚಾ
ಲೆಕ್ಕ" ಅಧ್ಯಾಯದ ಪಾಠ ಮಾಡುವಾಗ ಚ
ಬರೆದು ಇಷ್ಟಿಷ್ಟು ಮಿಠಾಯಿ ನಿಮಗೆ ಸಿಕ್ಕಿತ
ಮಿಕ್ಕದ್ದು ಕದ್ದರು ಎಂದು ನೇರವಾಗಿ ಹೆಚ್. ಎ
ಮೇಲೆ ಉದಾಹರಣೆಯೊಂದಿಗೆ ಎತ್ತಿ ಕಟ್ಟಿದ್ದಾರೆ.

ಇವುಗಳ ಬಗ್ಗೆ ಹಿರಿಯ ಅಧಿಕಾರಿಗಳ
ದೂರಿ ಟ್ರಾನ್ಸ್‌ಫರ್‌ಗೆ ಕೇಳಿಕೊಂಡರೂ, "ಇಂತ
ಶಾಲೆಗಳಲ್ಲಿ ನಿಮ್ಮಂಥವರೇ ಇರಬೇಕು. ನಾವಿದ್ದೇ
ಮುಂತಾಗಿ ಧೈರ್ಯ ಹೇಳಿ ಸುಮ್ಮನಾಗಿದ್ದಾ
ಇಲಾಖೆಗಳಿಂದ ನಡೆದ ಈ ಸಂಬಂಧದ ತನಿ
ಗಳಲ್ಲೂ ಹೆಚ್. ಎಂ. ತಪ್ಪಿತಸ್ಥರಲ್ಲ. ಹೀಗಿದ್ದರ
ಜಾತೀಯತೆ ಹಾಗೂ ಭ್ರಷ್ಟಾಚಾರ ತುಂಬಿ
ಕೆಲವರಿಂದ ದಲಿತ ಉಪಾಧ್ಯಾಯರು, ಕುಟುಂ
ದವರು, ದಲಿತ ವಿದ್ಯಾರ್ಥಿಗಳು, ನೋವು ಹಾಗ
ಮಾನಸಿಕ ಹಿಂಸೆಯನ್ನು ಅನುಭವಿಸಬೇಕಾಗಿ
ಸಮರ್ಥ ಹಾಗೂ ದಕ್ಷ ಉಪಾಧ್ಯಾಯರುಗಳ
ದರೂ ಅಸ್ಪೃಶ್ಯರೆಂಬ ಕಾರಣಕ್ಕಾಗಿ ರಾಮಯ
ನವರಂತೆ ಅದೆಷ್ಟು ಮಂದಿ ಈ ಸಮಾಜದ
ಅಜ್ಞಾತವಾಗಿ ಕಿರುಕುಳ ಹಾಗೂ ಮಾನಸಿ
ನೋವನ್ನು ಅನುಭವಿಸುತ್ತಿರುವರೋ ?

—ರಂಗಸ್ವಾಮಿ ಬೆಲ್ಲದಮ

ಬಡವರ ಭವಿಷ್ಯದ ಆಶಾಕಿರಣ : ದಿನದಿಂದ ದಿನಕ್ಕೆ ಪ್ರಜ್ವಲ ಮಾನ
ರಾಜ್ಯೋತ್ಸವ ದಿನಾಚರಣೆ 1 ನೇ ನವಂಬರ್ 1982

ಕರ್ನಾಟಕದಲ್ಲಿ ರಾಜ್ಯೋತ್ಸವ ದಿನಾಚರಣೆಯ ಶುಭ ಸಂದರ್ಭದಲ್ಲಿ ಈ ವರ್ಷದ ಸಾಧನೆಗಳನ್ನು ಅವಲೋಕಿಸಲು ಒಂದು ಸದವಕಾಶ ಒದಗಿದೆ. ಕಳೆದ ಮೂರು ವರ್ಷಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸರ್ವತೋಮುಖ ಪ್ರಗತಿಯನ್ನು ಸಾಧಿಸಲಾಗಿದ್ದು ಎಲ್ಲೆಲ್ಲೂ ಹುರುಪಿನ ಚಟುವಟಿಕೆ ಎದ್ದು ಕಾಣುತ್ತಿದೆ. ಕಳೆದ ವರ್ಷದಲ್ಲಂತೂ, ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್‌ರವರ ದಕ್ಷ ನೇತೃತ್ವದಲ್ಲಿ ಕರ್ನಾಟಕ ಮಹತ್ತರ ಸಾಧನೆಗಳನ್ನು ಮಾಡಿದೆ. ರಾಜ್ಯದ ಸರ್ವತೋಮುಖ ಪ್ರಗತಿಯನ್ನು ಪರಾಮರ್ಶಿಸಿದ ದೇಶದ ಜನಪ್ರಿಯ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಕರ್ನಾಟಕ ರಾಜ್ಯ ಭಾರತದ ಒಂದು ಅತ್ಯಂತ ಪ್ರಗತಿದಾಯಕ ರಾಜ್ಯ ಎಂದು ಪ್ರಶಂಸಿಸಿದ್ದಾರೆ.

ಕರ್ನಾಟಕ ಸರ್ಕಾರ ಹಿಂದುಳಿದ ಹಾಗೂ ದುರ್ಬಲ ವರ್ಗ ಜನಾಂಗದವರ ಸಾಮಾಜಿಕ ಸುಭದ್ರತೆಗಾಗಿ ಈ ವರ್ಷ ಅನೇಕ ಹೊಸ ಯೋಜನೆಗಳನ್ನು ರೂಪಿಸಿದೆ ; ತನ್ಮೂಲಕ ಬಡವರ ಬದುಕಿನಲ್ಲಿ ಆಶಾಕಿರಣವನ್ನು ಬೆಳಗಿಸಿದೆ

ನೇಗಿಲು ಭಾಗ್ಯ ;

ಸರ್ಕಾರದಿಂದ ಭೂಮಿಯನ್ನು ಪಡೆದ ಭೂ ಮಾಲಿಕರಿಗೆ ಆರ್ಥಿಕ ನೆರವು ನೀಡಿ,ಕೃಷಿ ಅಭಿವೃದ್ಧಿಗೆ ಸಹಾಯ ನೀಡುವುದೇ 'ನೇಗಿಲುಭಾಗ್ಯ'.

ಈ ಹೊಸ ಜಮೀನು ಮಾಲೀಕರಿಗೆ ಜಮೀನು ಅಭಿವೃದ್ಧಿಗೊಳಿಸಲು ಉಪಕರಣಗಳನ್ನು ಖರೀದಿಸಲು, ಎತ್ತುಗಳನ್ನು ಕೊಳ್ಳಲು ಹಾಗೂ ಇತರೇ ವ್ಯವಸಾಯ ಸಾಮಗ್ರಿಗಳನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡಲಿದೆ.

'ನೇಗಿಲು ಭಾಗ್ಯ' ಯೋಜನೆ ಜಾರಿಗೊಳಿಸಲು ಸರ್ಕಾರ ಈ ವರ್ಷ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ'.

ಸಾಗರದೀಪ :

ಕರ್ನಾಟಕದಲ್ಲಿ ಮೀನುಗಾರಿಕೆಗೆ ಅತಿ ಹೆಚ್ಚಿನ ಗಮನ ಹರಿಸಲಾಗಿದೆ. ಬೆಸ್ತರಿಗೆ ವಸತಿ, ಆಧುನಿಕ ದೋಣಿಗಳು, ಬಲೆಗಳು, ಮತ್ತಿತರ ಉಪಕರಣಗಳನ್ನು ಒದಗಿಸಿ ಸೂಕ್ತ ಮಾರಾಟ ವ್ಯವಸ್ಥೆಯನ್ನು ಕಲ್ಪಿಸುವುದೇ "ಸಾಗರದೀಪ" ಯೋಜನೆಯ ಗುರಿ.

ಈ ಯೋಜನೆಗಾಗಿ ಈ ವರ್ಷ 25 ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗುವುದು.

ಮುನ್ನಡೆ :

ನಿರುಪಯೋಗಿ ವಸ್ತುಗಳು ಹಾಗೂ ಕಬ್ಬಿಣದ ಚೂರುಪಾರುಗಳನ್ನು ಸಂಗ್ರಹಿಸಿ ಬಾಳ್ವೆ ನಡೆಸುವ ನಿಸ್ಸಹಾಯಕ ಕುಟುಂಬಗಳು ನಗರ ಪ್ರದೇಶಗಳಲ್ಲಿ ಅಪಾರ. ಇಂಥ ಕುಟುಂಬಗಳ ಸ್ಥಿತಿಯನ್ನು ಸುಧಾರಿಸಿ ಅವರಿಗೆ ಉತ್ತಮ ಜೀವನೋಪಾಯ ಕಲ್ಪಿಸಲು ರಾಜ್ಯ ಸರ್ಕಾರ ಹೊಸ ಯೋಜನೆಯನ್ನು ರೂಪಿಸಿದೆ. ಅದೇ "ಮುನ್ನಡೆ" ಯೋಜನೆ ಸಹಕಾರ ಸಂಘಗಳ ಮೂಲಕ ಅವರಿಗೆ ಹಣಕಾಸು ನೆರವು. ಸರ್ಕಾರ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟವರ್ಗಗಳ ಅಭಿವೃದ್ಧಿ ನಿಗಮ ಮತ್ತು ಬ್ಯಾಂಕುಗಳಿಗೆ ಮೇಲ್ಕಂಡ ಸಂಘಗಳಿಗೆ ಸಾಲ ನೀಡಲು ಆದೇಶ ನೀಡಿದೆ.

ಆಶಾಕಿರಣ :

ಹೆಂಡ ಇಳಿಸುವವರು, ಬೆಸ್ತರು, ವ್ಯವಸಾಯ ಕೂಲಿಯಾಳುಗಳು ಮುಂತಾದ ಅಸಂಘಟಿತ ಕ್ಷೇತ್ರದ ಹಲವಾರು ಶ್ರಮಿಕರು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಎಷ್ಟೋ ಅಪಾಯ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ. ಸರ್ಕಾರ ಇಂಥವರ ಕುಟುಂಬಗಳ ರಕ್ಷಣೆಗಾಗಿ ಈ ಯೋಜನೆಯನ್ನು ರೂಪಿಸಿದೆ. ಆಶಾಕಿರಣ ಈ ಕೂಲಿಯಾಳುಗಳು ವೃತ್ತಿ ನಿರತರಾಗಿದ್ದಾಗ ಅಪಘಾತಕ್ಕೀಡಾಗಿ ಅಂಗವಿಕಲರಾದರೆ ಅಥವಾ ದುರ್ಮರಣಕ್ಕೀಡಾದಾಗ ಅವರ ಕುಟುಂಬಗಳಿಗೆ ಪರಿಹಾರ ಧನವನ್ನು ನೀಡುವುದರ ಮೂಲಕ ನೆರವಾಗುತ್ತದೆ. ಈಗೀಗ ಸುಮಾರು 42 ಲಕ್ಷ ಕೂಲಿಯಾಳುಗಳು ನೆಮ್ಮದಿಯ ಉಸಿರು ಬಿಡುವಂತಾಗಿದೆ.

ಚೈತನ್ಯ :

ದುರ್ಬಲ ವರ್ಗದವರ ಬವಣೆಯನ್ನು ಶಾಶ್ವತವಾಗಿ ತೊಡೆಯಲು, ಅವರನ್ನು ಸ್ವಾವಲಂಬನೆಯತ್ತ ಕೊಂಡೊಯ್ಯಲು ನೆರವು ನೀಡುವುದೊಂದೇ ಪರಿಹಾರ ಮಾರ್ಗ. ಈ ನಿಟ್ಟಿನಲ್ಲಿ ಚೈತನ್ಯ ಯೋಜನೆ ಒಟ್ಟು 6 ಕೋಟಿ ರೂ.ಗಳ ನೆರವು ನೀಡುವುದರ ಮೂಲಕ, ಚಿಕ್ಕಪುಟ್ಟ ವ್ಯಾಪಾರಗಳನ್ನು ಪ್ರಾರಂಭಿಸಲು ಸಹಾಯ ಒದಗಿಸಿ, ಅವರ ಬಾಳ ಆಸರೆಯಾಗಲಿದೆ.

ವಿಶ್ವ ಕನ್ನಡ ಸಮ್ಮೇಳನ :

ಕರ್ನಾಟಕದ ವರ್ಣರಂಜಿತ ಚರಿತ್ರೆಯಲ್ಲಿ ಒಂದು ಸುವರ್ಣಾಧ್ಯಾಯಕ್ಕೆ ನಾಂದಿ ಪ್ರಪ್ರಥಮ ವಿಶ್ವ ಕನ್ನಡ ಸಮ್ಮೇಳನ. ಕರ್ನಾಟಕದ ಪರಂಪರೆಯ ಸೌಲಭ್ಯವನ್ನು ಪ್ರಪಂಚದ ಎಲ್ಲೆಡೆಗೂ ಪಸರಿಸುವುದೇ ಈ ಮಹಾ ಸಂಗಮದ ಆಶಯ.

ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವ ಈ ಕಣ್ಮನ ತಣಿಸುವ ಘಟನೆಯು ವೈಭವದ ಮೈಸೂರು ನಗರದಲ್ಲಿ 1983ನೇ ಜನವರಿ 3ರಿಂದ 9ರವರೆಗೆ ನಡೆಯಲಿದೆ. ಈ ವಿಶೇಷ ಸಂದರ್ಭದ ಪ್ರಯುಕ್ತ ಕರ್ನಾಟಕ ಸರ್ಕಾರ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ರಂಗಮಂಟಪಗಳನ್ನೂ ನಿರ್ಮಿಸುವುದಲ್ಲದೇ ಮೈಸೂರು ನಗರದಲ್ಲಿ ಶಾಶ್ವತ ವಸ್ತು–ಪ್ರದರ್ಶನ ಕಟ್ಟಡವನ್ನು ನಿರ್ಮಿಸಲಿದೆ. ಅಲ್ಲದೆ ಸರ್ಕಾರ ಜನಪ್ರಿಯ ಕನ್ನಡ ಪುಸ್ತಕಗಳನ್ನು ಶ್ರೀ ಸಾಮಾನ್ಯನಿಗೆ ಎಟುಕುವಂತೆ ಅತಿ ಕಡಿಮೆ ಬೆಲೆಗಳಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಿದೆ.

ಭರವಸೆ ಪೂರ್ಣ ಭವಿಷ್ಯದತ್ತ :

ಪ್ರತಿ ವರ್ಷವೂ ಕರ್ನಾಟಕ ರಾಜ್ಯ ಅಭಿವೃದ್ಧಿಯತ್ತ ದಿಟ್ಟಹೆಜ್ಜೆಯನ್ನಿಡುತ್ತಿದೆ. ಪ್ರತಿಯೊರ್ವ ನಾಗರೀಕನಿಗೂ ಉಜ್ವಲ ಹರ್ಷದಾಯಕ ಭವಿಷ್ಯದತ್ತ ಸಾಗಲು ಇದೊಂದು ಹೆದ್ದಾರಿ.

ಪ್ರಕಟಣೆ : ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ.

KRNN 106 PANCHAMA Fort nightly 5, November Reg. No. 2561/76

ಸಾಕಮ್ಮನ ಮೇಲೆ ಹಲ್ಲೆ: ಪ್ರತಿಭಟನಾ ಮೆರವಣಿಗೆ

ಪಿರಿಯಾಪಟ್ಟಣ ತಾಲ್ಲೂಕು ಬೇಗೂರು ಗ್ರಾಮದ ದಲಿತ ಮುದುಕಿ 61 ವರ್ಷ ವಯಸ್ಸಿನ ಸಾಕಮ್ಮ ಮತ್ತಿತರ ಹತ್ತು ಮಂದಿಯ ಮೇಲೆ ಅಲ್ಲಿನ ಭೂಮಾಲೀಕ ಜೋಪಯ್ಯ ಮತ್ತವನ ಗುಂಪು ಅಕ್ಟೋಬರ್ 24 ರ ರಾತ್ರಿ 9 ಗಂಟೆಯಲ್ಲಿ ಕೊಡಗಿನಿಂದ ಬಂದೂಕುಗಳನ್ನು ತಂದು ಬೆದರಿಕೆ ಗುಂಡುಗಳನ್ನು ಹಾರಿಸಿ, ದೊಣ್ಣೆಗಳಿಂದ ಹಲ್ಲೆ ನಡೆಸಿದೆ. ಸಾಕಮ್ಮನ ಎರಡೂ ಕೈಗಳ ಮೂಳೆಗಳು ಮುರಿದು, ಮತ್ತೊಬ್ಬನಿಗೆ ಗಾಯಗಳಾಗಿವೆ. ಬೆದರಿಕೆ ಗುಂಡುಗಳಿಗೆ ಹೆದರಿ ಪ್ರಾಣಭೀತಿಯಿಂದ ಉಳಿದವರು ಓಡಿದರೆ ಗೂಂಡಾಗಳ ಕೈಗೆ ಈ ಮುದುಕಿ ಸಿಕ್ಕಿ ಬಿದ್ದರು. ಮತ್ತೆ ಕೈಗಳು ಸ್ವಾಧೀನಕ್ಕೆ ಬರಲಾರದ ಮಟ್ಟಿಗೆ ತೀವ್ರವಾದ ಹಲ್ಲೆಯನ್ನು ನಡೆಸಲಾಗಿದ್ದು, ಸಾಕಮ್ಮನನ್ನು ಮೈಸೂರಿನ ಕೆ. ಆರ್. ಆಸ್ಪತ್ರೆಗೆ ಸೇರಿಸಲಾಗಿದೆ.

ಹತ್ತು ವರ್ಷಗಳ ಹಿಂದೆ ಮೂರು ಪಲ್ಲ ರಾಗಿಗೆ ವಾರಕ್ಕೆಂದು ಸಾಕಮ್ಮನ ಸುಮಾರು 8 ಎಕರೆ ಜಮೀನನ್ನು ಭೂಮಾಲೀಕ ಪಡೆದ. 3 ವರ್ಷಗಳು ಮಾತ್ರ ಸರಿಯಾಗಿ ವಾರದ ಬಾಬ್ತನ್ನು ಸಾಕಮ್ಮನಿಗೆ ಕೊಟ್ಟ. ನಂತರ ಕೊಡದಿದ್ದಾಗ ಸಾಕಮ್ಮ ತನಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಅಧಿಕಾರಿಗಳಿಗೆ ತನ್ನಲ್ಲಿದ್ದ ವಸ್ತುಗಳನ್ನು ಮಾರಿ ಲಂಚಕೊಟ್ಟರೂ ಪ್ರಯೋಜನವೇನು ಆಗಲಿಲ್ಲ. ದರಖಾಸ್ತು ಜಮೀನುಗಳು ಪರಭಾರೆ ಆಗಿದ್ದರೆ ಬಿಡಿಸಿಕೊಡುವ ಕಾನೂನು ಬಂದ ಮೇಲೆ ಸಾಕಮ್ಮ ಅರ್ಜಿಕೊಟ್ಟಳು. ಅದರಂತೆ ಅಕ್ಟೋಬರ್‌ನಲ್ಲಿ ಅಧಿಕಾರಿಗಳೇ ನಿಂತು ಸಾಕಮ್ಮನ ಜಮೀನಿನಲ್ಲಿ ಗುಡಿಸಲು ಹಾಕಿಸಿ ಜಮೀನನ್ನು ಬಿಡಿಸಿಕೊಡುವ ಪ್ರಯತ್ನಗಳಾದವು. ತಾನು ಬಹಳ ವರ್ಷಗಳಿಂದ ಅಡಿಕೆ, ತೆಂಗು ಬೆಳೆಸಿ ಬಿಟ್ಟುಕೊಡಲಾ ? ಎಂದು ಭೂಮಾಲೀಕರು ದಲಿತರ ಮೇಲೆ ಹಲ್ಲೆ ನಡೆಸಿ, ಹೋರಾಟಗಾರರನ್ನು ಕೆಣಕಿದ್ದಾರೆ.

ಸಾಕಮ್ಮನ ಮೇಲಿನ ಹಲ್ಲೆಯನ್ನು ಪ್ರ ಭಟಿಸಿ ಮತ್ತು ನ್ಯಾಯಕ್ಕಾಗಿ ಕರ್ನಾಟಕ ದಲಿ ಸಂಘರ್ಷ ಸಮಿತಿಯ ಪಿರಿಯಾಪಟ್ಟಣ ಶಾಖೆಯ ದಿನಾಂಕ 30–11–82 ರಂದು ಭಾರೀ ಮೆರವಣಿ ಮತ್ತು ಬಹಿರಂಗ ಸಭೆಗಳನ್ನು ನಡೆಸಿತು. ಬೇಗೂ ರಿನಿಂದ ಪಿರಿಯಾಪಟ್ಟಣದವರೆಗೆ ಸಾವಿರಾರು ಜ ಕಾಲು ನಡಿಗೆಯಲ್ಲಿ ಜಾತಾ ಹೊರಟು ನ್ಯಾಯ ಕ್ಕಾಗಿ ಕೂಗುತ್ತಾ, ಸಾಕಮ್ಮನ ಮೇಲೆ ಹಲ್ಲೆ ನ ಸಿದವರನ್ನು ಶಿಕ್ಷಿಸಬೇಕೆಂದು ಒತ್ತಾಯಿಸುತ್ತ ಪಿ ಯಾಪಟ್ಟಣವನ್ನು ತಲುಪಿದರು. ಸಂಜೆ ನಡೆ ಬಹಿರಂಗ ಸಭೆಯಲ್ಲಿ ದೊಡ್ಡಣ್ಣ, ಮುಳ್ಳೂರ ನಾಗರಾಜ್, ಮಂಗಳೂರು ವಿಜಯ, ದಾವಣ ಗೆರೆಯ ವಕೀಲರಾದ ಶಿವಾನಂದಸ್ವಾಮಿ ಮಾ ನಾಡಿದರು. ಸಭೆಯ ಅಧ್ಯಕ್ಷತೆಯನ್ನು ರಾಜ ಸಂಚಾಲಕರಾದ ಬಿ. ಕೃಷ್ಣಪ್ಪ ವಹಿಸಿದ್ದರು.

ಬೂವನಹಳ್ಳಿಯಲ್ಲಿ ಅಮಾನುಷ ಧಾಳಿ

ಹಾಸನ ನಗರದಿಂದ ಸುಮಾರು 5 ಕಿ.ಮಿ. ದೂರದಲ್ಲಿರುವ ಬುವನ ಹಳ್ಳಿಯ ದಲಿತರ ಮೇಲೆ ದಿನಾಂಕ 13-10-82ರ ರಾತ್ರಿ ಭೂಮಾಲಿಕ ಸವರ್ಣೀಯರ ಗುಂಪು ಅಮಾನುಷವಾದ ಧಾಳಿ ನಡೆಸಿ, ಆಸ್ತಿ—ಪಾಸ್ತಿಗಳನ್ನು ನಾಶಮಾಡಿರುವುದಲ್ಲದೆ ಪ್ರಾಣಭೀತಿಯನ್ನು ಹುಟ್ಟಿಸಿದೆ.

ಹಿಂದಿನಿಂದಲೂ ಕೂಡ ಇಲ್ಲಿಯ ದಲಿತರು ಸತ್ತದನ ತೆಗೆಯುವುದು, ತಮಟೆ ಬಡಿಯುವುದು ಪ್ರತಿದಿನ ಯಾರಾದರೊಬ್ಬ ಸವರ್ಣೀಯರ ಬೀದಿಗಳ ಕಸಗೂಡಿಸುವುದು ಹಡಿಬಿಟ್ಟಿ ಕೆಲಸಗಳನ್ನು ಮಾಡುತ್ತಿದ್ದು, ಅದನ್ನು ನಿರಾಕರಿಸಿದ್ದೆ ಈ ಧಾಳಿಗೆ ಕಾರಣವಾಗಿದೆ. ಅಲ್ಲದೆ, 14 ಎಕರೆ ದಲಿತರ ದರಖಾಸ್ತು ಭೂಮಿಯನ್ನು ಕಬಳಿಸಿರುವ ಬಗ್ಗೆ ದಲಿತರು ಎಚ್ಚೆತ್ತಿದ್ದು ಕೂಡ ಸೇರಿಕೊಂಡಿದೆ. ಪಂಚಾಯಿತಿ ಅಧ್ಯಕ್ಷ ಜನಾರ್ದನಗೌಡ ಪಟೇಲ್ ಈರೇಗೌಡ ಮುಂತಾದವರನ್ನೊಳಗೊಂಡ 300 ಜನರ ಸವರ್ಣೀಯರ ಗುಂಪು 18 ಮನೆಗಳ ಹೆಂಚುಗಳನ್ನು ಒಡೆದು ಚೂರು ಚೂರು ಮಾಡಿ, 19 ಜನರಿಗೆ ತೀವ್ರವಾದ ಗಾಯಗಳಾಗುವಂತೆ ಹಲ್ಲೆ ನಡೆಸಿ ಮನೆಗಳಲ್ಲಿದ್ದ ರೇಡಿಯೋ, ಪಾತ್ರೆಗಳು, ರಾಗಿ, ಅಕ್ಕಿ ಇತ್ಯಾದಿ ವಸ್ತುಗಳನ್ನು ದೋಚಿರುವುದಲ್ಲದೆ ದಲಿತರು ಬರದಂತೆ ಮನೆಯ ಬಾಗಿಲುಗಳನ್ನು ಮುಚ್ಚಿ ದಿಗ್ಬಂಧನ ವಿಧಿಸಿ ದಲಿತರು ಪ್ರಾಣಭೀತಿಯಿಂದ ನರಳುವಂತೆ ಮಾಡಿದ್ದಾರೆ.

ಪೋಲೀಸು ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಇದು ಎರಡು ದಲಿತರ ಗುಂಪಿನ ನಡುವೆ ನಡೆದ ಜಗಳವೆಂದು ಘಟನೆಗೆ ಬೇರೆ ಬಣ್ಣ ಬಳಿಯಲು ಪ್ರಯತ್ನಿಸುತ್ತ ಈ ಕೃತ್ಯಕ್ಕೆ ಕಾರಣರಾದವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ತಪಿತಸ್ಥರನ್ನು ಕೂಡಲೇ ಬಂಧಿಸಿ ತಕ್ಕ ಶಿಕ್ಷೆ ವಿಧಿಸಿ ನೊಂದವರಿಗೆ ಪರಿಹಾರ ಕೊಡಬೇಕೆಂದು ಹಾಸನ ದ. ಸಂ. ಸ. ಸಂಬಂಧಪಟ್ಟವರನ್ನು ಒತ್ತಾಯಿಸಿದೆ.

(ವರದಿ : ಮುನಿಸ್ವಾಮಿ)

ಮಹಿಳಾ ಕಾರ್ಯಕರ್ತರ ಶಿಬಿರ

ಶೋಷಣೆಯು ಅವಿಭಾಜ್ಯ ಅಂಗವಾಗಿರು ಮಹಿಳೆಯರನ್ನು ಹೋರಾಟದಲ್ಲಿ ತೊಡಗಿಸು ದೃಷ್ಟಿಯಿಂದ ಇತ್ತೀಚೆಗೆ ರಾಜ್ಯಮಟ್ಟದ ಮಹಿಳ ಕಾರ್ಯಕರ್ತರ ತರಬೇತಿ ಶಿಬಿರವನ್ನು ವ್ಯವಸ ಗೊಳಿಸಲಾಗಿತ್ತು. ಎರಡು ದಿನಗಳು ನಡೆದ ಈ ಶಿಬಿರಕ್ಕೆ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಉತ್ಸಾ ಹಿ ಮಹಿಳೆಯರು ಭಾಗವಹಿಸಿದ್ದು ದು ಸಂಘಟನೆಯ ದೃಷ್ಟಿಯಿಂದ ಹೊಸ ಭರವಸೆ ಮೂಡಿಸಿತು.

ಮಹಿಳೆಯರ ಸಮಗ್ರ ಬದುಕನ್ನು ಒ ಗೊಂಡ ಹೊಸ ಚಿಂತನೆಗೆ ಶಿಬಿರ ಅವಕಾಶ ಮಾಡಿ ಕೊಟ್ಟಿತ್ತು. ಇಂದಿನ ಸಮಾಜದಲ್ಲಿ ಮಹಿಳೆಯ ಮೇಲಿನ ದೌರ್ಜನ್ಯಗಳು, ಅತ್ಯಾಚಾರಗಳು, ಶಿಕ್ಷಣ ಆರೋಗ್ಯ, ಮೂಢನಂಬಿಕೆ, ಮಹಿಳಾ ಸಂಘಟನೆ ಯ ಅನಿವಾರ್ಯತೆ ಮುಂತಾದ ವಿಷಯಗಳನ್ನು ಕುರಿತು ಶ್ರೀಮತಿ ಗಾಯಿತ್ರಿದೇವಿ ಕು|| ಕುಮುದಾ ಶ್ರೀಮತಿ ರತಿ, ಶ್ಯಾಮಲ, ಕು|| ಲಲಿತ ಇವರುಗಳು ಮಾತನಾಡಿದರು. ಶ್ರೀಮತಿ ಭಾರತಿ ರಾಜಣ್ಣ ಶಿಬಿರದ ವ್ಯವಸ್ಥೆಯ ಮೇಲ್ವಿಚಾರಕರಾಗಿದ್ದರು.

ಸಂಪಾದಕ : ಹುಲ್ಲುಕೆರೆಮಹಾದೇವ, ಪ್ರಕಾಶಕ ; ಹೆಚ್. ಗೋವಿಂದಯ್ಯ, ಮುದ್ರಣ : ವಿನಯ ಪ್ರಿಂಟರ್ಸ್, 2514, ಎ. ಕೆ. ಜಿ. ಕೊಪ್ಪಲು ಮೈಸೂರು-4